ಆಗುವುದಿಲ್ಲವೆಂದು ನಾನು ಹೇಳಿದ ಮೇಲೆ, I will allow in some other form, but not through adjournment motion. ನಾನು ಏನು ಹೇಳಿದೆ ಆಗಲೀ? ನನಗೆ ಒಂದು ಗಂಟೆ ಟೈಂ ಕೊಡಿ, ನನ್ನ ಮೈಂಡ್ ಅಪ್ಲೈ ಮಾಡುತ್ತೇನೆ ಅಂತ. ಒಬ್ಬರು ನಿಲುವಳಿ ಸೂಚನೆ ಮೇಲೆ ಮಾತನಾಡುವುದು, ಇನ್ನೊಬ್ಬರು 69 ಕೆಳಗೆ ಮಾತನಾಡುವುದು - ಇದು ಹೇಗೆ

ವಿಷಯ(ಇ) ನಿಲುವಳಿ ಸೂಚನೆಗೆ ಅನುಮತಿಗೆ ಮಂಡನೆ- ಬೆಂಗಳೂರು ಸುತ್ತಮುತ್ತ ನಗರ ಸಭೆಗಳಲ್ಲಿ ಲೋಕಾಯುಕ್ತ ಧಾಳಿಯಿಂದ ಬೆಳಕಿಗೆ ಬಂದಿರುವ ಪ್ರಕರಣಗಳ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಇವತ್ತು ನಾನು ನಿಲುವಳಿ ಸೂಚನೆ ಮೂಲಕ ಬಹಳ ಪ್ರಾಮುಖ್ಯವಾದ ವಿಷಯವನ್ನು ಮಂಡನೆ ಮಾಡಿದ್ದೇನೆ. ಅದನ್ನು ಅದೇ ರೂಪದಲ್ಲಿ ಒಪ್ಪುವಿರೋ ಇಲ್ಲವೋ ಎಂಬುದು ತಮ್ಮ ವಿವೇಚನೆಗೆ ಬಿಟ್ಟದ್ದು. ಆದರೆ ನಿಲುವಳಿ ಸೂಚನೆ ಬಗ್ಗೆ ಇವತ್ತೇನು ಸಿಎಂಸಿಗಳಲ್ಲಿ ಭ್ರಷ್ಟಾಚಾರ ನಡೆದಿದೆ, ಲೋಕಾಯುಕ್ತರು ಧಾಳಿ ಮಾಡಿದ್ದು, ನಾನು ಪ್ರಾಥಮಿಕವಾಗಿ ಕೆಲವು ವಿಷಯಗಳನ್ನು ಇಲ್ಲಿ ಮಂಡನೆ ಮಾಡುತ್ತೇನೆ.

Mr. Speaker: I will allow, but not through adjournment motion, but in some other form, I can understand the seriousness of the subject.

ಶ್ರೀ ಜಗದೀಶ್ ಶೆಟ್ಟರ್:- ಈಗ ತೀರ್ಮಾನ ಕೊಡುವಂಥದ್ದಲ್ಲ, ನನ್ನ ಕಡೆಯಿಂದ ಪೂರ್ವ ಭಾವಿ ಹಿಯರಿಂಗ್ ಆದಮೇಲೆ ಯಾವ ರೂಪದಲ್ಲಿ ಕೊಡುವಿರೆಂದು ತೀರ್ಮಾನ ಕೊಡಬಹುದು.

ಅಧ್ಯಕ್ಷರು:- ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಇವತ್ತು ನಿಲುವಲಿ ಸೂಚನೆ ಮೂಲಕ ಬಹಳ ಪ್ರಾಮುಖ್ಯವಾದ ವಿಷಯವನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಬೆಂಗಳೂರು ಸುತ್ತಮುತ್ತಲಿನ ನಗರಸಭೆಗಳ ಏನಿವೆ ಅವುಗಳಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ಹಗರಣಗಳು ಈಗ ಹೊರಕ್ಕೆ ಬರುತ್ತಿವೆ. ಇದಕ್ಕೆ ಮುಂಚಿತವಾಗಿ ಮುಖ್ಯಮಂತ್ರಿಗಳ ಕಡೆಗೆ ಸಾಕಷ್ಟು ದೂರುಗಳು ಹೋದುವು. ಏನ್ ಕ್ವೈರಿ ಅಂತ ಫಿಕ್ಸ್ ಮಾಡಿದರು. ಅದರೇನೂ ಆಗಲಿಲ್ಲ. ಈ ಬ್ರಷ್ಟಾಚಾರ ಹಗರಣದಲ್ಲಿ 200 ಕೋಟಿ ಸೇರಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ ನನಗನ್ನಿಸುತ್ತದೆ; ಹಿಂದೆ ರಾಷ್ಟ್ರದಲ್ಲಿ ಬೋಫೊರ್ಸ್‌ನ ಹಗರಣ ಅಂತ 67 ಕೋಟಿ ರೂ.ಗಳದ್ದು ಆಯಿತು, ಒಂದು ಕೇಂದ್ರ ಸರ್ಕಾರವೇ ಹೋಯಿತು. ಬೋಫೋರ್ಸ್ ಇಶ್ಯೂ ಮೇಲೆ ಒಂದು ಮಹಾಚುನಾವಣೆಯೂ ಆಯಿತು. ಇನ್ನು ಬಿಹಾರದಲ್ಲಿ ನಡೆದದ್ದು 800 ಕೋಟಿಗಳದ್ದು.

(ಗೊಂದಲ)

ಅಧ್ಯಕ್ಷರು:- ನಿಮ್ಮನ್ನು ಕರೆದಿಲ್ಲ, ವಿರೋಧಪಕ್ಷದವರು ಮಾತನಾಡುತ್ತಾರೆ, ಗೌರವ ಕೊಟ್ಟು ಸುಮ್ಮನಿರಿ. ಆಮೇಲೆ ನೀವೂ ಮಾತನಾಡಿ.

ಶ್ರೀ ಎಚ್.ಕೆ.ಪಾಟೀಲ್:- ಬೋಫೋರ್ಸ್ ಅಂದರೆ ಮೊನ್ನೆ ಕಾರ್ಗಿಲ್‌ನಲ್ಲಿ ಉಪಯೋಗ ಮಾಡುತ್ತಿದ್ದರಲ್ಲಾ ಅವೇ ತಾನೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿ ಎರಡು ವರ್ಷಗಳಲ್ಲಿ 200 ಕೋಟಿ ರೂ.ಗಳ ಹಗರಣ ಹೊರಕ್ಕೆ ಬಂದಿದೆ. ಇದರಲ್ಲಿ ಸಣ್ಣ ಮೀನುಗಳಿರಬಹುದು, ದೊಡ್ಡ ಮೀನುಗಳಿರಬಹುದು, ದೊಡ್ಡ ತಿಮಿಂಗಲಗಳೂ ಇದರಲ್ಲಿ ಇದ್ದಾವು. ಇತರ ನಗರಸಭೆಗಳಲ್ಲಿ ಎಲ್ಲೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಗರಣನಡೆದಿರಲಿಕ್ಕಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧವನ್ನು ಘೋಷಣೆ ಮಾಡಿದ್ದಾರೆ: ಭ್ರಷ್ಟಾಚಾರವನ್ನು ಪೂರ್ತಿಯಾಗಿ ನಾನು ನಿರ್ಮೂಲನ ಮಾಡುತ್ತೇನೆ ಎಂದರು. ಆ ಯುದ್ಧ ಎಲ್ಲಿ ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ. ಸರ್ಕಾರದ ಕಡೆಯಿಂದ ಈ ಭ್ರಷ್ಟಾಚಾರ ವಿರುದ್ಧ ಏನು ಕ್ರಮ ತೊಗೆದುಕೊಂಡರು ಎಂಬುದು ಹೊರಗೆ ಬರುತ್ತಿಲ್ಲ. ಮುಖ್ಯವಾಗಿ ನಾನು ಪ್ರಸ್ತಾಪ ಮಾಡುವುದು; ನ್ಯಾಯಮೂರ್ತಿ ಶ್ರೀ ವೆಂಕಟಾಲ ಅವರು ಲೋಕಾಯುಕ್ತರಾಗಿ ನೇಮಕವಾದ ಮೇಲೆ ಅವರ ಕ್ರಿಯಾಶೀಲತೆಯಿಂದ ಇಡೀ ರಾಜ್ಯದಲ್ಲಿ ಭ್ರಷ್ಟಾಚಾರದ ವಿರುದ್ಧದ ಒಂದು ವಾತಾವರಣ, ಸಾರ್ವಜನಿಕರಿಗೆ ಒಂದು ಅವೇರ್‌ನೆಸ್ ಕ್ರಿಯೇಟಾಗಿದೆ ಎಂಬುದು. ನ್ಯಾಯಮೂರ್ತಿ ವೆಂಕಟಾಚಲ ಅವರು ಭ್ರಷ್ಟಾಚಾರದ ವಿರುದ್ಧ ಏನು ಧಾಳಿ ನಡೆಸಿದ್ದಾರೆ ಅದಕ್ಕಾಗಿ ನಾನು ಪ್ರತಿಪಕ್ಷದ ಎಲ್ಲರ ಪರವಾಗಿ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಲೋಕಾಯುಕ್ತರಿಗೆ ಸಲ್ಲಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಹಿಂದೆ ಮಾನ್ಯ ಟಿ.ಎನ್.ಶೇಷನ್ ಚುನಾವಣಾ ಕಮಿಷನರ್ ಆಗಿ ನೇಮಕಗೊಂಡಾಗ ಚುನಾವಣೆ ವ್ಯವಸ್ಥೆ ಬಗ್ಗೆ ಯಾವ ರೀತಿ ಚಿಂತನೆ ಅವೇರನೆಸ್ ಕ್ರಿಯೇಟಾಯಿತೋ ಅದೇ ರೀತಿ ನ್ಯಾಯಮೂರ್ತಿ ವೆಂಕಟಾಚಲ ಅವರೆದೆಯಿಂದ ಸಾರ್ವಜನಿಕರಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟದ ಮನೋಭಾವನೆ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕೆ ಕಾರಣಕರ್ತರು ನಮ್ಮ ಲೋಕಾಯುಕ್ತರು.

ಅಧ್ಯಕ್ಷರು:- ಬ್ರಿಫಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ನಾನು ಏನೂ ಮಾತನಾಡುವುದಿಲ್ಲ. ನಿಲುವಳಿ ಸೂಚನೆ ಮೇಲೆ ಇಲ್ಲಿ ದಿನಗಟ್ಟಲೆ ಚರ್ಚೆ ನಡೆದಿದೆ.

ಅಧ್ಯಕ್ಷರು:- ಮಾನ್ಯ ಶೆಟ್ಟರ್‌ರವರೇ, ದಯವಿಟ್ಟು ಕೇಳಿ. ನನಗೆ ಮನದಟ್ಟು ಆಗಲು ಎಷ್ಟು ಬೇಕೋ ಅಷ್ಟು ಮಾತನಾಡಿ ಎಂದಷ್ಟೇ ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ನಾವು ಒಂದು ಕಳುಹಿಸಿದ್ದೇವೆ. ಈ ನಿಲುವಳಿ ಸೂಚನೆಗಳ ವಿಚಾರವೇನಿದೆ ಅದು ಲೋಕಾಯುಕ್ತದವರು ತನಿಖೆ ನಡೆಸುತ್ತಿದ್ದಾರೆಂಬುದು ಒಂದು ಭಾಗ. ನಿಲುವಳಿ ಸೂಚನೆ ಬಗ್ಗೆ ವಿಷಯ ಪ್ರಸ್ತಾಪ ಆಗುವ ಮುನ್ನವೇ ತಾವು ಒಂದು ತೀರ್ಮಾನಕ್ಕೆ ಬರುವುದು ಅಷ್ಟು ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯ ಅಧ್ಯಕ್ಷರೇ.

ಅಧ್ಯಕ್ಷರು:- ಅಲೋ ಮಾಡುತ್ತೇನೆ ಎಂದು ಹೇಳುತ್ತಿದ್ದೇನಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾವು ಏನೇನು ಹೇಳಬೇಕೆಂದು ಇದ್ದೇವೋ ಅದನ್ನು ತಾವು ಕೇಳಿ. ಅದಾದನಂತರ ತಮ್ಮ ತೀರ್ಮಾನ ಕೊಡಿ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ.

ಅಧ್ಯಕ್ಷರು:- ಮಾತನಾಡಬೇಡಿ ಅಂತ ಹೇಳಲಿಲ್ಲ ; ಬ್ರೀಫಾಗಿ ಹೇಳಿ ಅಂದೆ. ನನಗೆ ಮನದಟ್ಟುಮಾಡಿಕೊಡಿ ಎಂದು ಹೇಳಿದೆ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ವಿಧಾನ ಪರಿಷತ್ತಿನಲ್ಲಿ 30 ವರ್ಷಗಳ ಹಿಂದೆಯೇ ಸಭಾಪತಿಗಳಾಗಿ ತಾವು ಕೆಲಸ ಮಾಡಿದವರು. ಅಧ್ಯಕ್ಷ ಸ್ಥಾನ ತಮಗೇನೂ ಹೊಸದಲ್ಲ. ಸಾಧಾರಣವಾಗಿ ಇಂತಹ ನಿಲುವಳಿ ಸೂಚನೆ ಬಗ್ಗೆ ಮಾತನಾಡುವಾಗ ಬಹುತೇಕ ಅಂಶಗಳನ್ನು ಆರಂಭಿಕವಾಗಿ ಮಂಡನೆಯಲ್ಲೇ ಹೇಳುತ್ತೇವೆ. ಅದಾದ ಮೇಲೆ ನೀವು ಅಲೋ ಮಾಡಿದರೆ ಆಗ ಸವಿಸ್ತಾರವಾಗಿ ದಾಖಲಾತಿಗಳು ಮತ್ತೊಂದು ಎಲ್ಲಾ ಹೇಳುತ್ತೇವೆ. ಮತ್ತು ಇದರಲ್ಲಿ ಯಾರೂ ಗಾಬರಿ ಆತಂಕ ಬೀಳುವ ಅವಶ್ಯಕತೆ ಇಲ್ಲ. ಇದರಲ್ಲಿ ಸಚಿವಸಂಪುಟದ ಸದಸ್ಯರು ಅಥವಾ ಸರ್ಕಾರ ಯಾವ ರೀತಿ ಶಾಮೀಲಾಗಿದೆಯೆಂದು ನಾವು ಹೇಳಬೇಕಾಗುತ್ತದೆ. ಲೋಕಾಯುಕ್ತ ತನಿಖೆ ಬಗ್ಗೆ ನಾವು ಹೇಳಲು ಹೋಗುವುದಿಲ್ಲ. ಅವರಿಗೆ ಕಾನೂನಿದೆ. ಅವರು ಕೆಲಸವನ್ನು ಮಾಡಿಕೊಂಡು ಹೋಗಲಿ. ಅವರು ಒಪ್ಪತಕ್ಕದ್ದು ಅದು ಬೇರೆ ವಿಚಾರ. ಆದರೆ ಸರ್ಕಾರದ ಪಾತ್ರವೇನು? ಇದರ ಬಗ್ಗೆ ಬಹಳ ಮಹತ್ವದ್ದು; ಸರ್ಕಾರದ ಖಜಾನೆ ಯಾವರೀತಿ ಲೂಟಿಯಾಗುತ್ತಿದೆ, ಸಾರ್ವಜನಿಕರಿಗೆ ಯಾವರೀತಿ ತೊಂದರೆಯಾಗಿದೆ ಎನ್ನುವುದನ್ನು ನಾವು ಹೇಳಬೇಕಾಗಿದೆ. ಆದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ. ಅದಾದನಂತರ ನಾನು ಮಾತನಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಸಂಸದೀಯ ಮತ್ತು ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, I have a Point of Order. I make a submission. - ಪ್ರಿಲಿಮಿನರಿ ಸಬ್ ಮಿಷನ್ ಮೇಲೆ ಈ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಯಾವ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಅಂದರೆ ಸರ್ಕಾರದ್ದು ನೇರವಾಗಿ ಮಾನ್ಯ ಸಿಂಧ್ಯಾರವರು ಹೇಳಿದಹಾಗೆ ಪಾತ್ರವೇನು ಎಂಬುದು. ಇವೆಲ್ಲಾ ಸ್ವಾಯತ್ತ ಸಂಸ್ಥೆಗಳು ಇಲ್ಲಿ ಸರ್ಕಾರದ ಪಾತ್ರವೇನೂ ಇರುವುದಿಲ್ಲ ಎನ್ನತಕ್ಕಂಥಾದ್ದನ್ನು ನಾನು ಮೊದಲು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಯಾವುದು ನೇರವಾಗಿ ಶಾಸನಸಭೆಯಲ್ಲಿ ನಾವು ಚರ್ಚೆ ಮಾಡತಕ್ಕದ್ದು ಅಥವಾ ರಾಜ್ಯದ್ದನ್ನು ಸಂಸತ್ ನಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅಡ್ಜರ್ನ್ ಮೆಂಟ್ ಮೋಷನನ್ನು ತರುವಾಗ ನೇರವಾಗಿ ಸರ್ಕಾರಕ್ಕೆ ಸಂಬಂಧ ಇಲ್ಲದೇ ಇರತಕ್ಕ ಆಡಳಿತ ವ್ಯವಸ್ಥೆ ಏನು ಇದೆ, ಸ್ವಾಯತ್ತ ಸಂಸ್ಥೆಗಳಲ್ಲಿ ಅದು ಅಡ್ಜರ್ನ್‌ಮೆಂಟ್ ಮೋಷನ್ ಆಗುವುದಕ್ಕೆ ಸಾಧ್ಯವಿರುವುದಿಲ್ಲ ಎನ್ನುವುದು ನನ್ನ ಮೊದಲನೇ ಅಬ್ಜೆಕ್ಷನ್. ಎರಡನೆಯದು ಈ ಅಟಾನಮಸ್ ಸಂಸ್ಥೆಗಳಲ್ಲಿ ಏನು ನಡೆಯುತ್ತದೋ ಅದು ಈ ಶಾಸನಸಭೆಯೊಳಗೆ ಚರ್ಚೆ ಮಾಡುವುದು ಸಂಪ್ರದಾಯ ಇಲ್ಲ. ಆಮೇಲೆ ಏನಾಗಿದೆ ಎಂದರೆ ಇದು ಬಜೆಟ್ ಅಧಿವೇಶನ. ಈ ಬಜೆಟ್ ಅಧಿವೇಶನದಲ್ಲಿ ಇಲಾಖೆ ಮೇಲೆ ಚರ್ಚೆ ಮಾಡುವಾಗ ಯಾವ ವಿಚಾರಗಳನ್ನು ಬೇಕಾದರೂ ಚರ್ಚೆ ಮಾಡುವುದಕ್ಕೆ ಸರ್ವತಂತ್ರ ಸ್ವಾತಂತ್ರ್ಯ ಇದೆ. ಆದ್ದರಿಂದ ಪುನಃ ಅಡ್ಜರ್ನ್‌ಮೆಂಟ್ ಮೋಷನ್ ಆಗಿ ತರತಕ್ಕಂಥದ್ದು ಈ ಬಜೆಟ್ ಅಧಿವೇಶನ ಎನ್ನುವಂಥ ಒಂದು ಒಟ್ಟಾರೆ ವ್ಯವಸ್ಥೆಗೆ ಇದು ಸರಿ ಹೋಗುವುದಿಲ್ಲ ಎನ್ನುವಂಥಾದ್ದು ನನ್ನ ಅಭಿಪ್ರಾಯ. ಮತ್ತೆ ಇನ್ನೊಂದು ವಿಚಾರವನ್ನು ನಾನು ಹೇಳಿದೆ. ಈ ಸ್ಟಾಟ್ಯುಟರಿ ಅಥಾರಿಟಿ ಈಗ

ಅವರೇ ಹೇಳಿದ ಹಾಗೆ ಲೋಕಾಯುಕ್ತ ಒಂದು ಎನ್‌ಕ್ವೈರಿ ಮಾಡತಕ್ಕ ಸಂಸ್ಥೆ. ಇದು ತಾನು ಏನು ಮಾಡಬಹುದು, ನಾನು ಅದರ ಬಗ್ಗೆ 'ವಿವರಕ್ಕೆ ಹೋಗುವುದಿಲ್ಲ. ಅವರು ಮಾಡಿರುವುದು ಸರಿ' ಅಥವಾ ತಪ್ಪು ಎಂತಲೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರಿಂದ ದೇಶದಲ್ಲಿ ಇರತಕ್ಕ ಭ್ರಷ್ಟಾಚಾರವನ್ನು ಹೊರಹಾಕುವುದಕ್ಕೆ ಅಲ್ಲಿರತಕ್ಕ ಹೂರಣಗಳನ್ನು ಹೊರಗೆ ತೆಗೆಯುವುದಕ್ಕೆ ಒಟ್ಟಾರೆ ಆಡಳಿತ ್ಣವಸ್ಥೆ ಈಗಿನದು ಎಂತಲ್ಲ; ಮೊದಲಿನಿಂದಲೂ ಒಟ್ಟಾರೆ ಆಡಳಿತ ವ್ಯವಸ್ಥೆಯಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಒಂದು ಮಾರ್ಗಸೂಚಿ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಎಲ್ಲಾ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ವಿಪುಲವಾದಂಥ ಅವಕಾಶಗಳು ಇವೆ. ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಇಫಿಟ್ ಇನ್ ಆಗುವುದಿಲ್ಲ ಎನ್ನುವುದು ನನ್ನ ಪಾಯಿಂಟ್ ಆಫ್ ಆರ್ಡರ್. I seek your guidance.

ಶ್ರೀ ಎಸ್. ಸುರೇಶ್‌ಕುಮಾರ್:- ಈಗ ಈ ಸಿಗರೇಟ್ ಪ್ಯಾಕ್ ಮೇಲೆ "Smoking is injurious to health" ಎಂದು ಇರುತ್ತದೆ. ನೋಡಿದ್ದೀರಾ ಸ್ವಾಮಿ? ನೀವು ಒಂದು ಆ ರೀತಿ ಹಾಕಿಬಿಡಿ. "ಸದನದಲ್ಲಿ ಸರ್ಕಾರದ ವಿರುದ್ಧ ಮಾತನಾಡುವುದು ಅಕ್ಷಮ್ಯ ಅಪರಾಧ" ಎಂದು. Come out with that. ಮತ್ತೆ ಇನ್ನೇನಿದೆ? ಜೀರೊ ಹವರ್‌ನಲ್ಲಿ ಮಾತನಾಡುವ ಹಾಗೆ ಇಲ್ಲ. ಅಡ್ಜರ್ನ್ ಮೆಂಟ್ ಮೋಷನ್ ಮೇಲೆ ಮಾತನಾಡುವ ಹಾಗೆ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಇಲ್ಲಿರುವ ಸತ್ಸಂಪ್ರದಾಯಗಳನ್ನು ಹೇಳಿದೆ. ನಾವೇ ಮಾಡಿರುವ ನಿಯಮಗಳ ಬಗ್ಗೆ ಹೇಳಿದೆ. ಇದ್ಯಾವುದು ಬೇಡ ಎಂದರೆ ನೀವು ಹೇಳಿದ ಹಾಗೆ ಒಂದು ಪುಸ್ತಕವನ್ನು ಬರೆದು ಕೊಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:- ಸಮಸ್ಯೆ ಏನು ಗೊತ್ತಾ ಚಂದ್ರೇಗೌಡರೇ?

ಶ್ರೀ ಡಿ.ಬಿ. ಚಂದ್ರೇಗೌಡ:- ಸಮಸ್ಯೆಯಲ್ಲ ಇದು. ಸಮಸ್ಯೆ ನನ್ನದೂ ಅಲ್ಲ, ನಿಮ್ಮದೂ ಅಲ್ಲ. ಸಮಸ್ಯೆ ಅಧ್ಯಕ್ಷರದ್ದು. ಅವರು ನೀವು ಹೇಳಿದ್ದನ್ನೂ ಕೇಳಿದ್ದಾರೆ. ನಾನು ಹೇಳಿದ್ದನ್ನು ಕೇಳಿದ್ದಾರೆ. ಅವರೇನು ತೀರ್ಪು ಕೊಡುತ್ತಾರೋ ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:- ಸಮಸ್ಯೆ ಬಗ್ಗೆ ನೀವು 15 ನಿಮಿಷದ ಹಿಂದೆ ಏನು ಹೇಳಿದಿರಿ ಎಂದು ನಿಮಗೆ ಜ್ಞಾಪನ ಇಲ್ಲ. ನೀವು 15 ನಿಮಿಷದ ಹಿಂದೆ ಏನು ಹೇಳಿದಿರಿ ಎಂಬುದು ನನಗೆ ಜ್ಞಾಪಕ ಇದೆ. ಅದು ಸಮಸ್ಯೆ ಆಗ ಏನು ಹೇಳಿದಿರಿ, ಇದನ್ನು ಜೀರೋ ಹವರ್‌ನಲ್ಲಿ ತೆಗೆದುಕೊಳ್ಳಬಾರದು, ಇದು ಬೇರೆ ಒಂದು ರೂಪದಲ್ಲಿ ಬರಬೇಕು ಎಂದು. ಬೇರೆ ರೂಪದಲ್ಲಿ ಬಂದರೆ ಈ ರೂಪದಲ್ಲಿ ಬರಬಾರದು. ಬೇರೆ ರೂಪದಲ್ಲಿ ಬರಬೇಕೆನ್ನುವುದು ಇದರ ಅರ್ಥವೇನು?

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಸರ್ಕಾರದ ವಿರುದ್ಧ ಮಾತನಾಡಬಾರದು ಎನ್ನುವ ಒಂದು ಬೋರ್ಡನ್ನು ಹಾಕಿಬಿಡಲಿ. ವಿರೋಧಪಕ್ಷದವರು ಏನು ಬೇಕಾದರೂ ಮಾತನಾಡಬಹುದು ಎನ್ನುವ ಒಂದು ಬೋರ್ಡನ್ನು ಹಾಕಲಿ. ಎರಡೂ ಇರಲಿ.

ಶ್ರೀ ಎಸ್. ಸುರೇಶ್ ಕುಮಾರ್:- ಆಮೇಲೆ ವೋಟಿಂಗ್‌ಗೆ ಕೇಳುತ್ತೀರಲ್ಲಾ. ನೀವೇ ಕೈಎತ್ತುವುದೇ ಜಾಸ್ತಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಈ ಒಂದು ಸ್ವಾಯತ್ತ ಸಂಸ್ಥೆಗಳ ಬಗ್ಗೆ ಮಾತನಾಡಬಾರದು ಎಂದು ಮಾನ್ಯ ಚಂದ್ರೇಗೌಡರು ಹೇಳಿದರು, ಮತ್ತು ಅಲ್ಲಿ ಹಗರಣಗಳೇನು ನಡೆಯುತ್ತಿದೆ, ಅದರ ಬಗ್ಗೆ ಮಾತನಾಡಬಾರದು ಎಂದು ಅವರು ಹೇಳಿದರು. ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದು, ಇವತ್ತು ಆ ಒಂದು ಸ್ವಾಯತ್ತ ಸಂಸ್ಥೆಗಳಾದ ನಗರಸಭೆಗಳೇನು ಇದ್ದಾವೆ, ಅಲ್ಲೇನು ಹಗರಣಗಳು ನಡೆಯುತ್ತಿವೆ, ಅಲ್ಲಿ ಸರ್ಕಾರದ ಒಂದು ನೇರ ಪಾತ್ರ ಇದೆ. ಸರ್ಕಾರವೆಂದರೆ ಯಾರು? ಸರ್ಕಾರದಲ್ಲಿರುವಂಥ ಮಂತ್ರಿಗಳ ಒಂದು ನೇರವಾದ ಪಾತ್ರ ಇದೆ ಎನ್ನುವಂಥದ್ದು ನಾನು ಮುಂದೆ ಪ್ರಸ್ತಾವನೆ ಮಾಡುವಂಥಾದ್ದು ಇದೆ. ಯಾವ ರೀತಿ ಅದಕ್ಕೊಂದು ಸಂಬಂಧ ಬರುತ್ತದೆ ಎಂದು. ಅದರ ಬಗ್ಗೆ ವಿಚಾರಣೆ ನಡೆಯಬೇಕು ಎನ್ನುವ ಬಗ್ಗೆ ನಾನು ಪ್ರಸ್ತಾವ ಮಾಡುವಂಥದ್ದು. ಹೀಗಾಗಿ ಇದು ಬಹಳ ಮಹತ್ವದ ಪ್ರಸ್ತಾವನೆ ಇರುವುರಿಂದ ಈ ನಿಲುವಳಿ ಸೂಚನೆ ಮುಖಾಂತರ ಇವತ್ತು ತುರ್ತಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಮಂಡನೆ ಮಾಡಿದ್ದೇನೆ. ಇಲ್ಲಿ ಪ್ರಮುಖವಾಗಿ ಲೋಕಾಯುಕ್ತ ಇದೆ. ನಾನು ಒಂದೆರಡು ಡಾಕ್ಯುಮೆಂಟ್‌ಗಳನ್ನು ರೆಫರ್ ಮಾಡುತ್ತಿದ್ದೇನೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಸಾರ್ವಜನಿಕರು. ಒಂದು ವರ್ಷದ ಹಿಂದೆ ಅದನ್ನು ಬರೆದರು. ಕಳೆದ ವರ್ಷ ಬೆಂಗಳೂರು ನಗರದ ಬಿಜೆಪಿ ಕಾರ್ಯದರ್ಶಿ, ಸಚ್ಚಿದಾನಂದಮೂರ್ತಿ ಮತ್ತು ಇನ್ನಿತರ ನಾಗರೀಕರು ಕೂಡಿಕೊಂಡು ಮುಖ್ಯಮಂತ್ರಿಗಳಿಗೆ ಒಂದು ಕಂಪ್ಲೇಂಟನ್ನು ಹಿಂದಿನ ವರ್ಷ ಕೊಟ್ಟರು. ಆ ಕಪ್ಲೇಂಟ್ ಆಧಾರದ ಮೇಲೆ ಅಲ್ಲಿ ಯಾರ್‍ಯಾರು ಇದ್ದರು, ಈ ಹಗರಣದಲ್ಲಿದ್ದಾರೆ, ಮತ್ತು ಸರ್ಕಾರದಲ್ಲಿರುವವರು ಯಾರು ಇದರಲ್ಲಿ ಇದ್ದಾರೆ ಎನ್ನುವಂಥದ್ದನ್ನು ಒಂದು ಪತ್ರದ ಮುಖೇನ ಎಲ್ಲಾ ವಿವರಗಳನ್ನು ಕೊಟ್ಟು ಮುಖ್ಯಮಂತ್ರಿಗಳಿಗೆ ಕಂಪ್ಲೇಂಟನ್ನು ಕೊಟ್ಟರು. ಆ ಕಂಪ್ಲೇಟ್‌ಗೆ ಮುಖ್ಯಮಂತ್ರಿಗಳು ಇದನ್ನು ಇನ್‌ವೆಸ್ಟಿಗೇಷನ್ ಮಾಡಬೇಕು ಎಂದು ಅದನ್ನು ಎನ್ ಕ್ವೈರಿಗೆ ಹಾಕಿದರು. ಇದನ್ನು ನಗರಾಭಿವೃದ್ಧಿ ಕಾರ್ಯದರ್ಶಿಗಳಿಗೆ ಎನ್ ಕ್ವೈರಿಗೆ ಹಾಕಿದರು.ಮುಂದೆ ಎನ್‌ಕ್ವೈರಿ ಏನಾಯಿತು ಎನ್ನುವುದು ಹೊರಗೆ ಬರಲಿಲ್ಲ. ಆ ರಿಪೋರ್ಟ್ ಏನಾಯಿತು ಎಂದು ಹೊರಗೆ ಬರಲಿಲ್ಲ. ಮತ್ತು ಒಂದು ಕಡೆ ಇಲ್ಲಿ ಏನು ನಡೆಯುತ್ತಿದೆ ಎನ್ನುವ ಒಂದು ಮಾಹಿತಿಗಳನ್ನು ಕೇಳಿದರೆ ಆ ಮಾಹಿತಿ ಕೊಡುವಂಥ ಸಹನೆ ಕೂಡ ನಮ್ಮ ಅಧಿಕಾರಿಗಳಲ್ಲಿ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಭ್ರಷ್ಟಾಚಾರದ ವಿರುದ್ಧ ಒಂದು ಧರ್ಮ ಯುದ್ಧವನ್ನು ಘೋಷಣೆ ಮಾಡಿದರು. ಆದರೆ ಭ್ರಷ್ಟಾಚಾರ ಎಷ್ಟು ಕಡಿಮೆ ಆಯಿತು, ಯಾವ ಅಂಶ ಕಡಿಮೆ ಆಯಿತಚು ಎಂಬುದು ಗೊತ್ತಿಲ್ಲ. ಮತ್ತೊಂದು 'ಮಾಹಿತಿ ಪಡೆಯುವ ಹಕ್ಕು' ಕಾನೂನನ್ನು ತೆಗೆದುಕೊಂಡು ಬಂದರು. ಆ ಕಾನೂನು ಇವತ್ತಿಗೂ ಅನುಷ್ಠಾನವಾಗಲಿಲ್ಲ. ಏಕೆ ಅನುಷ್ಠಾನವಾಗಲಿಲ್ಲ? ಇವತ್ತಿಗೂ ರೂಲ್ಸ್ ಫ್ರೇಮ್ ಮಾಡಲಿಲ್ಲ. ಒಂದು ವರ್ಷವಾಯಿತು. ಹಾಗಾದರೆ ಇವರ ಬೋನಾಫೈಡ್ಸ್ ಏನು? ಈ ಭ್ರಷ್ಟಾಚಾರ, ಈ ವ್ಯವಸ್ಥೆ ಹೋಗಬೇಕು, ಅದರ ಬಗ್ಗೆ ಒಂದು ಬೋನಾಫೈಡ್ ನೆಸ್, ಮಾಹಿತಿ ಹಕ್ಕೂ ಇಲ್ಲ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಒಂದು ವಿಷಯದ ಬಗ್ಗೆ ಮಾನ್ಯ ಚಂದ್ರೇಗೌಡರು ಇಲ್ಲಿ ತಕರಾರು ಮಾಡುತ್ತಾರೆ, ಇದರ ಚರ್ಚೆ ಬೇಡ ಎಂದು ಹೇಳಿ.

ಆದರೆ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿಧಾನಪರಿಷತ್ತಿನಲ್ಲಿ ಈ ರೀತಿ ಏನು ಲೋಕಾಯುಕ್ತದವರು ನಗರಸಭೆಗಳ ಮೇಲೆ ಧಾಳಿ ಮಾಡಿದ್ದಾರೆ, ಅಲ್ಲಿ ಏನು ಭ್ರಷ್ಟಾಚಾರದ ಹಗರಣಗಳು ನಡೆದಿವೆ, ಆ ಭ್ರಷ್ಟಾಚಾರ ಹಗರಣಗಳ ಬಗ್ಗೆ ನಾನು ಸಂಪೂರ್ಣವಾಗಿ ಸದನದಲ್ಲಿ ಚರ್ಚೆ ಮಾಡುವುದಕ್ಕೆ ತಯಾರು ಇದ್ದೇನೆ ಎನ್ನುವ ಮಾತನ್ನೂ ಹೇಳಿದರು. ಇವತ್ತು ಅದು ಮಾನ್ಯ ಮುಖ್ಯಮಂತ್ರಿಗಳ ಬಾಯಿಂದಲೇ ಬಂದಿದೆ. ಅವರು ಸದನದಲ್ಲಿ ಒಪ್ಪಿಕೊಂಡಿದ್ದಾರೆ. ಈ ರೀತಿ ಮುಖ್ಯಮಂತ್ರಿಗಳೇ ಚರ್ಚೆಗೆ ತಯಾರು ಇರುವ ಸಂದರ್ಭದಲ್ಲಿ ಈ ಲೋಕಾಯುಕ್ತ ಧಾಳಿ, ನಗರಸಭೆಗಳ ಮೇಲೆ ಧಾಳಿ, ಅದರಲ್ಲಿ ಇದ್ದಂಥ ಎಲ್ಲಾ ವಿವರಗಳ ಬಗ್ಗೆ ಚರ್ಚೆ, ಅದರಲ್ಲಿ ಯಾರ್‍ಯಾರು ಇದ್ದಾರೆ, ಅವರ ಮೇಲೆ ಎಲ್ಲಾ ರೀತಿ ಕ್ರಮವನ್ನು ಕೈಗೊಳ್ಳುತ್ತೇನೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳೇ ಸದನದಲ್ಲಿ ಒಪ್ಪಿಕೊಂಡು ಇವತ್ತು ವಿಧಾನಸಭೆಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿದರೆ ಇದಕ್ಕೆ ನೂರೆಂಟು ಕಾರಣಗಳನ್ನು ತೆಗೆಯುತ್ತಿದ್ದಾರೆ. ನಗರಸಭೆಗಳ ಬಗ್ಗೆ, ಅಲ್ಲಿ ನಡೆದಿರುವ ಹಗರಣಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಯಾರು ಇದ್ದಾರೆ. ಆದರೆ ನಮ್ಮ ಸಂಸದೀಯ ವ್ಯವಹಾರಗಳು ಮತ್ತು ಕಾನೂನು ಸಚಿವರು ಅದು ಚರ್ಚೆ ಮಾಡುವುದಕ್ಕೆ ಇಲ್ಲಿ ಬರುವುದಿಲ್ಲ ಎನ್ನುವಂಥದ್ದು. ಮುಖ್ಯಮಂತ್ರಿಗಳು ತಯಾರಿದ್ದಾರೆ. ಇವರು ಮಾತ್ರ ತಯಾರಿಲ್ಲ. ಇದು ವಿತಂಡ ವಾದವನ್ನು ತೋರಿಸುತ್ತದೆ. ಅಂದರೆ ಭ್ರಷ್ಟಾಚಾರದ ವ್ಯವಸ್ಥೆ, ಈ ಭ್ರಷ್ಟಾಚಾರದ ಹಗರಣಗಳೇನು ನಡೆಯುತ್ತಿವೆಯಲ್ಲಾ, ಇದನ್ನು ಮುಚ್ಚಿಡುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಸರ್ಕಾರದ ಕಡೆಯಿಂದ ಆಗುತ್ತಿದೆ ಎನ್ನುವಂಥದ್ದನ್ನು ನಾನು ಇಲ್ಲಿ ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ತಾವು ಹಿರಿಯರಿದ್ದೀರಿ. ವಿರೋಧ ಪಕ್ಷದ ನಾಯಕರಿದ್ದಿರಿ. ಸದನವನ್ನು ತಪ್ಪು ದಾರಿಗೆ ಎಳೆಯಬೇಡಿ. ನಾನು ಹೇಳತಕ್ಕದ್ದು ಈ ವಿಚಾರ ಅಡ್ಜರ್ನ್‌ಮೆಂಟ್ ಮೋಷನಲ್ಲಿ ಸರಿ ಆಗುವುದಿಲ್ಲ ಎನ್ನುವಂಥದ್ದು. ಚರ್ಚೆ ಮಾಡಬೇಡಿ, ಮುಚ್ಚಿ ಹಾಕುತ್ತೀರಿ, ಉಪನಾಯಕರು ಹಾಗೆ ಹೇಳುತ್ತಾರೆ, ನಾಯಕರೂ ಹಾಗೆ ಹೇಳುತ್ತಾರೆ, ಯಾರೂ ಮುಚ್ಚುವುದಕ್ಕೆ ತಯಾರಾಗಿಲ್ಲ. ಆದರೆ ಯಾವ ವಿಧಿ ವಿಧಾನಗಳನ್ನು ಚರ್ಚೆಗೆ ಅನುಸರಿಸಬೇಕು ಎನ್ನುವುದಷ್ಟೇ ನಾನು ನನ್ನ ಜವಾಬ್ದಾರಿಯನ್ನು ಮಾಡುತ್ತಿದ್ದೇನೆ ಎಂದು ಪದೇ ಪದೇ ಹೇಳಿದ್ದೇನೆ. ಪುನಃ ಇದು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಇದು ಚರ್ಚೆಯಾಗಬೇಕೆಂದರೆ ಅವರು ಅವಕಾಶ ಕೊಟ್ಟರೆ ಮಾಡಿ ಸ್ವಾಮಿ. ನನ್ನದೇನೂ ಅಭ್ಯಂತರವಿಲ್ಲ. ಏಕೆಂದರೆ ಈ ವಿಚಾರಗಳು ಜಗಜ್ಜಾಹೀರಾಗುತ್ತವೆ. ನಮಗೂ ಆಸಕ್ತಿ ಇದೆ. ಆದರೆ ಆಸಕ್ತಿ ಇದೆ ಎಂದು ಹೇಳಿ ಇದೆಲ್ಲಾ ನಡೆಯುವುದಕ್ಕಾಗುವುದಿಲ್ಲ. ನಾವುಗಳು ಮಾಡಿಕೊಂಡಿರುವ ನಿಯಮಗಳ ವ್ಯಾಪ್ತಿಯಲ್ಲಿ ನಡೆಯಬೇಕಲ್ಲಾ ನನಗೂ ಮೇಲ್ಮನೆಯಲ್ಲಿ ಇದೇ ಚರ್ಚೆ ನಡೆಯುತ್ತಿದೆ ಎಂಬುದು ಗೊತ್ತು. ರೂಲ್ 331ಕ್ಕೆ ಕನ್‌ವರ್ಟ್ ಮಾಡಿಕೊಂಡು ಮಾಡುತ್ತಿದ್ದಾರೆ. ಹಾಗೆಯೇ ನಿಯಮಗಳ ವ್ಯಾಪ್ತಿಯಲ್ಲಿ ಮಾಡೋಣ ಎಂದಷ್ಟೇ ನಾನು ಹೇಳಿದ್ದು. ಇದು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಹಾಗಾದರೆ ಚರ್ಚೆಯನ್ನು ಪ್ರಾರಂಭ ಮಾಡೋಣ. ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಸಲಹೆ ಕೊಡುವುದಿಲ್ಲ. ಅದನ್ನು ಅವರಿಗೆ ಬಿಟ್ಟಿದ್ದೇನೆ.

Mr. Speaker:- When other opportunities are available to members ಆ ಸಮಯದಲ್ಲಿ ತಾವು ಆ ಸಬ್ಜೆಕ್ಟ್‌ನ್ನು ರೈಜ್ ಮಾಡಬಹುದು, but not through adjournment motion ಎಂದು ನಾನು ಹೇಳುತ್ತಿದ್ದೇನೆ. ಹಿಂದೆ 8-9 ಜನ ಎಕ್ಸ್ ಸ್ಪೀಕರ್‌ಗಳು ರೂಲಿಂಗ್‌ನ್ನು ಕೊಟ್ಟಿದ್ದಾರೆ.

1.00 ಪಿ.ಎಂ.

ಆದರೆ ಅಪರ್ಚುನಿಟೀಸ್ ಇರುವಾಗ ಎಸ್ಪೆಷಿಯಲಿ ಬಜೆಟ್ ಸೆಕ್ಷನ್‌ನಲ್ಲಿ ಅವುಗಳನ್ನು ರೈಸ್ ಮಾಡಬೇಕಾಗಿಲ್ಲ. ಬಜೆಟ್‌ನ ಮೇಲೆ ಚರ್ಚೆಗೆ ಡಿಮ್ಯಾಂಡ್ಸ್ ಬಂದಾಗ ರೈಸ್ ಮಾಡಿ ಎಂದು ಕೇಳಿ 7-8 ಜನ ಸ್ಪೀಕರ್ಸ್ ರೂಲಿಂಗ್ ಕೊಟ್ಟಿದ್ದಾರೆ. My predecessors have given ruling. I will uphold what Mr. Gowda has said. ಬಜೆಟ್ ಸೆಕ್ಷನ್‌ನಲ್ಲಿ ಮಾತ್ರ ಬೇರೆ ಅಪರ್ಚುನಿಟೀಸ್ ಇರುವುದರಿಂದ ಅಲ್ಲಿ ಮಾತನಾಡಬಹುದೇ ಹೊರತು even otherwise, I am allowing you not through Adjournment motion.

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ಈ ನಿಲುವಳಿ ಸೂಚನೆ ಇರುವುದು ಏಕೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಸನ್ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಫಾರಂನಲ್ಲಿ ನಾನು ಅಲೋ ಮಾಡುವುದಿಲ್ಲ ಎಂದು ಹೇಳಬಾರದು. ನಮ್ಮಲ್ಲಿ ನಾನು ಬಹಳ ವಿನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ನಮ್ಮ ಆರ್ಗ್ಯುಮೆಂಟ್ಸ್ ಏನು ಎಂದು ಕೇಳುವ ಮುಂದೆ ತಾವು ತೀರ್ಮಾನ ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು:- ನಿಮ್ಮ ಆರ್ಗ್ಯುಮೆಂಟ್ಸ್‌ನ್ನೂ ಕೇಳುತ್ತಿದ್ದೇನಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅವರು ಕೇಳಿ ಆದಮೇಲೆ ನಾನು ಸಹ ಸ್ವಲ್ಪ ಮಾತನಾಡಬೇಕಾಗಿದೆ.

ಅಧ್ಯಕ್ಷರು:- ತಾವೂ ಮಾತನಾಡಿ, ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಅವರು ಮಾತನಾಡಿದ ಮೇಲೆ ತಾವು ತೀರ್ಮಾನಕ್ಕೆ ಬನ್ನಿ.

ಅಧ್ಯಕ್ಷರು:- ಮಾನ್ಯ ರಾಮದಾಸ್ ಅವರೇ, ಅವರು ಹೇಳಿದ್ದನ್ನೇ ಹೇಳುತ್ತೀರಿ.

ಶ್ರೀ ಎ. ರಾಮದಾಸ್:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಾನೂನು ಮಂತ್ರಿಗಳು ಹೇಳಿದಂತಹ ವಿಚಾರದಲ್ಲಿ ನಮಗೆ ತಿಳುವಳಿಕೆ ಇಲ್ಲ. ಅದಕ್ಕೇ ಅಪ್ರೈಸ್ ಮಾಡಬೇಕು ಎಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ಈ ಒಂದು ಅಡ್ಜರ್ನ್‌ಮೆಂಟ್ ಮೋಷನ್

ಅನ್ನುವುದು ನಾವು ಏತಕ್ಕೆ ತಂದಿದ್ದೇವೆ ಎಂದರೆ ಸರ್ಕಾರ ಕಂಪಲ್ಸರಿಯಾಗಿ ಇದಕ್ಕೆ ಉತ್ತರ ಕೊಡಬೇಕು. ಬಜೆಟ್‌ನಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಎಲ್ಲಕ್ಕೂ ಕೂಡ ಉತ್ತರ ಕೊಡಬೇಕು ಎನ್ನುವಂತಹ ಕಂಪಲ್ಸರಿ ಇರುವುದಿಲ್ಲ. ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತರುತ್ತೇವೆ. ಇದರಲ್ಲಿ ತಮಗೆ ಕನ್‌ವಿನ್ಸ್ ಮಾಡುತ್ತೇವೆ. ಸರ್ಕಾರದ ಪಾತ್ರ ಸಂಪೂರ್ಣವಾಗಿದೆ ಎಂದು ಹೇಳಿ ದಾಖಲೆಗಳನ್ನು ನಾವು ನಿಮಗೆ ಕೊಡುತ್ತೇವೆ. ನಿಮಗೂ ಕೂಡ ಸಮಾಧಾನ ಆಗುತ್ತದೆ. ಆಡಳಿತಪಕ್ಷ ಇರಬಹುದು, ಬೇರೆ ಪಕ್ಷದಲ್ಲಿದ್ದವರೂ ಕೂಡ ಸರ್ಕಾರದ ಉತ್ತರದಲ್ಲಿ ಏನಾದರೂ ಕೂಡ ಸಮಸ್ಯೆ ಆದಂತಹ ಸಮಯದಲ್ಲಿ, ಸರ್ಕಾರ ಮುಚ್ಚಿಡುತ್ತದೋ ಏನೋ ಎಂಬ ವಿಚಾರಗಳು ಬಂದಾಗ ಓಟಿಂಗ್ ಹಾಕುವಂತಹ ಸಂದರ್ಭ ಬಂದಾಗ ಕೂಡ ಈ ಪ್ರಜಾಪ್ರಭುತ್ವದಲ್ಲಿ ಭ್ರಷ್ಟಾಚಾರವನ್ನು ಕಡೆಗಾಣಿಸಬೇಕು ಎಂದು ಹೇಳಿ ಎಲ್ಲರೂ ಕೂಡ ಓಟು ಮಾಡಬಹುದು. ಇಲ್ಲಿ ಮೊದಲನೆಯದಾಗಿ ಅವರು ಹೇಳಿದ ಹಾಗೆ, ಸರ್ಕಾರದ ಪಾತ್ರ ಇದೆ ಎಂದು ತೋರಿಸಬೇಕು ಎಂದು ಹೇಳಿದ್ದಾರೆ. ಆ ಕರ್ತವ್ಯವನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಇನ್ನು ಎರಡನೆಯದಾಗಿ ಸ್ವಾಯತ್ತ ಸಂಸ್ಥೆಗಳ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಯಾವುದೇ ಕಾರಣಕ್ಕೂ ಬರಬಾರದು ಎನ್ನುವಂತಹ ವಿಚಾರವನ್ನು ಹೇಳಿದ್ದಾರೆ. ಇಲ್ಲಿ ಕೇವಲ ಸ್ವಾಯತ್ತ ಸಂಸ್ಥೆಯ ಬಗ್ಗೆ ಮಾತ್ರ ಇಲ್ಲ. ಸರ್ಕಾರದ ವಿವಿಧ ಅಂಗಗಳ ಬಗ್ಗೆ ಆಗಿರುವಂತಹ ಒಂದು ವಿಚಾರವನ್ನು ನಿಮ್ಮ ಮುಂದೆ ಅಪ್ರೈಸ್ ಮಾಡುವುದಕ್ಕೆ ದಯಮಾಡಿ ಈಗಲೇ ರೂಲಿಂಗ್ ಕೊಡಬೇಡಿ. ಅಡ್ಜರ್ನ್‌ಮೆಂಟ್ ಮೋಷನ್‌ಗೆ ಪ್ರಾವಿಜನ್ ಮಾಡಿಕೊಡಿ ಎಂದು ಹೇಳಿ ಅವರು ಹೇಳಿದಂತಹ ವಿಚಾರಕ್ಕೆ ಉತ್ತರವನ್ನು ನಾವು ಕೇಳುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿ ನಾನು ಪ್ರಸ್ತಾಪ ಮಾಡಿದಂತಹ ವಿಷಯದ ಬಗ್ಗೆ ಹೇಳುವಂತಹದು, ಈ ನಿಲುವಳಿ ಸೂಚನೆ ಮುಖಾಂತರ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎನ್ನುವಂಥದ್ದು, ರೂಲ್ 60, ಈ ನಿಯಮಗಳ ಉಪಬಂಧಗಳಿಗೆ ಒಳಪಟ್ಟು ಸಾರ್ವಜನಿಕವಾಗಿ ಅತ್ಯಂತ ಮಹತ್ವವೂ, ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯ ಕಲಾಪಗಳ ಬಗ್ಗೆ ನಿಲುವಳಿ ಸೂಚನೆಯನ್ನು ತರಬಹುದು ಎಂದು ಇದೆ. ಹಾಗಾದರೆ ಈ ಭ್ರಷ್ಟಾಚಾರ ಏನು ನಡೆಯುತ್ತಿದೆ, ಏನೊಂದು ವ್ಯವಸ್ಥೆ ಇದೆ, ಇದರ ಬಗ್ಗೆ ನಿಲುವಳಿ ಸೂಚನೆಯನ್ನು ತರುವುದಕ್ಕೆ ಬರುವುದಿಲ್ಲವೋ ಎಂಬ ಚಿಂತನೆಯನ್ನು ನಾವು ಮಾಡಬೇಕಾಗುತ್ತದೆ. ರೂಲ್‌ನಲ್ಲಿ ಇದೆ, ಸಾರ್ವಜನಿಕ ಮಹತ್ವದ ವಿಷಯದ ಬಗ್ಗೆ ಚರ್ಚೆ ಮಾಡಲಿಕ್ಕೆ ರೂಲ್ 60ರ ಪ್ರಕಾರ ಸದನದಲ್ಲಿ ಅವಕಾಶ ಇದೆ. ಈ ವಿಷಯವನ್ನು ನಾವು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಈ ವಿಚಾರ ನಿಲುವಳಿ ಸೂಚನೆ ಮುಖಾಂತರ ಬರುವುದಿಲ್ಲ, ಬೇರೆ ರೂಪದಲ್ಲಿ ತರಬಹುದು ಎಂದು ಹೇಳಿದರು. ಮೊದಲು ಸರ್ಕಾರ ತನ್ನ ಬೋನಾಫೈಡ್ ತೋರಿಸಲಿ. ಇವತ್ತು ಈ ಒಂದು ಚರ್ಚೆಗೆ ಅವಕಾಶ ಮಾಡಿಕೊಡಬೇಕಾದಂತಹ ಸಂದರ್ಭದಲ್ಲಿ, ಯಾವ ರೂಪದಲ್ಲಿ ತರಬೇಕು ಎಂಬ ವಿಚಾರದಲ್ಲಿ ಪೂರ್ತಿ ಡಿಸ್ಕ್ರಿಷನರಿ ಪವರ್ ತಮಗೆ ಇದೆ. ಯಾವ ರೂಪದಲ್ಲಿ ಚರ್ಚೆಯನ್ನು ಮುಂದುವರಿಸಬೇಕು ಎನ್ನುವಂತಹ ವಿಚಾರದಲ್ಲಿ ತಮಗೆ ಪವರ್ ಇದೆ. ಆದರೆ ನಾವು ವಿಷಯವನ್ನೇ ಪ್ರಸ್ತಾಪ ಮಾಡಲಾರದೆ ಮೊದಲ ಹಂತದಲ್ಲಿಯೇ ಇದು ಬರುವುದಿಲ್ಲ ಎನ್ನುವುದನ್ನು ನಮ್ಮ ಮಾನ್ಯ ಕಾನೂನು ಸಚಿವರು ಹೇಳುತ್ತಾರೆ ಎಂದರೆ

ಅದು ಸರಿಯಲ್ಲ. ಏಕೆಂದರೆ ಸಾಕಷ್ಟು ಅನುಭವ ಇದ್ದಂತಹವರು. ಈ ರೀತಿ ಹಿಂದೆ ಬಹುಶಃ ಎಲ್ಲಾ ಸಂಪ್ರದಾಯಗಳನ್ನೂ ನೋಡಿದಾಗ ಆ ನಿಲುವಳಿ ಸೂಚನೆಯ ಪ್ರಾಥಮಿಕ ಹಂತದಲ್ಲಿ ಏನು ಸಬ್ಮಿಷನ್ ಮಾಡುತ್ತೇವೆ, ದಿನನಿತ್ಯ ಚರ್ಚೆ ನಡೆದಿದೆ. ಅಂತಹದನ್ನು ಇವತ್ತು ನಮ್ಮ ಕಾನೂನು ಸಚಿವರು ಯಾವ ರೀತಿ ಚರ್ಚೆಗೆ ಅವಕಾಶ ಆಗದ ರೀತಿಯಲ್ಲಿ ಹೇಳುತ್ತಿದ್ದಾರೆ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಬಗ್ಗೆ ಏಕೆ ಪ್ರಾವಿಷನ್ಸ್ ಅನ್ನು ಈ ಸಭೆ ಮಾಡಿಕೊಂಡಿದೆ ಎಂದರೆ ವಿಷಯದ ಮಹತ್ವದ ದೃಷ್ಟಿಯಿಂದ ನಡೆಯತಕ್ಕಂತಹ ಕಾರ್ಯಕಲಾಪಗಳನ್ನು ಮುಂದೂಡಿ ಇದನ್ನು ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು, ಒತ್ತು ಕೊಡಬೇಕು ಎಂತಲೂ, ಒಂದು ವೇಳೆ ಯಾವ ಪ್ರಮಾಣದಲ್ಲಿ ಇರಬೇಕು ಎಂದರೆ ಒಂದು ತರಹ ಸೆನ್ಸಾರ್ ಮೋಷನ್ ಇದ್ದ ಹಾಗೆ. ಯಾವುದೋ ಕಾಲದಲ್ಲಿ ಚರ್ಚೆ ಆಗತಕ್ಕದ್ದು ಅಲ್ಲ. ಬಜೆಟ್ ಸೆಕ್ಷನ್‌ನಲ್ಲಿ ಇಂಥವಕ್ಕೆ ಅವಕಾಶ ಕೊಟ್ಟಿಲ್ಲ. ಇಂತಹ ಸಮಯದಲ್ಲಿ ತಾವು ಮಾನ್ಯ ವಿರೋಧ ಪಕ್ಷದ ನಾಯಕರು ತಂದು ಪ್ರಿಸೆಡೆಂಟ್ಸನ್ನು ಕೊಟ್ಟರೆ ಅವು ಹೆಲ್ಪ್‌ಫುಲ್ ಆಗುತ್ತದೆ. ಬಜೆಟ್ ಡಿಮ್ಯಾಂಡ್ಸ್ ಬರುತ್ತದೆ. ಅಲ್ಲಿ ಸವಿಸ್ತಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ಸವಿಸ್ತಾರವಾಗಿ ಸರ್ಕಾರ ಸಹ ಉತ್ತರ ಕೊಡಲು ಅವಕಾಶ ಇದೆ. ನಿಲುವಳಿ ಸೂಚನೆ ಅದು ಸೆನ್ಸಾರ್ ಮೋಷನ್. ಅದು ಹೇಗಿರಬೇಕು, ಎಂಬ ಬಗ್ಗೆ ತಾವು ಉತ್ತರ ಕೊಡತಕ್ಕದ್ದು. ಮಾನ್ಯ ವಿರೋಧ ಪಕ್ಷದ ನಾಯಕರು ಇಂತಹ ವಿಚಾರವನ್ನು ಮಾಡಬಹುದು ಹಾಗೆ ಎಂದು ಹೇಳಿ ಯಾವುದಾದರೂ ಒಂದು ಪ್ರಿಸಿಡೆಂಟ್ಸ್ ತಂದು ತೋರಿಸಿದರೆ ಅದು ಅನುಕೂಲ ಆಗುತ್ತದೆ. ನನಗೆ ತಿಳಿದ ಹಾಗೆ ಬಜೆಟ್ ಸೆಷನ್‌ನಲ್ಲಿ ಇಂತಹ ರೂಪದಲ್ಲಿ ನಿಲುವಳಿ ಸೂಚನೆಗೆ ಎಲ್ಲೂ ಅವಕಾಶ ಕೊಟ್ಟಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆ ಎಂದರೆ, ಲೋಕಾಯುಕ್ತದವರು ರೈಡ್ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಸರ್ಕಾರದವರು ಲೋಕಾಯುಕ್ತದವರು ಮಾಡತಕ್ಕ ಕೆಲಸಕ್ಕೆ ಅಡ್ಡಿ ಬಂದಿಲ್ಲ. ಆದರೆ ಇನ್ನೂ ನಡೆಯುತ್ತಿದೆ. ಲೋಕಾಯುಕ್ತದವರು ಹೋಗಿ ನೋಡಿದ್ದಾರೆ. ಅದರ ಮೇಲೆ ಎನ್‌ಕ್ವೈರಿ ಆಗಬೇಕು. ಅಲ್ಲಿರತಕ್ಕಂತಹ ಅಧಿಕಾರಿಗಳು ಏನು ತಪ್ಪು ಮಾಡಿದ್ದಾರೋ ಬಿಟ್ಟಿದ್ದಾರೋ ಎಂದು ನೋಡಿ ಶಿಕ್ಷೆ ಆಗತಕ್ಕಂತಹುದು. ಅವರಿಗೆ ಶಿಕ್ಷೆ ಕೊಡತಕ್ಕಂತಹ ಅಧಿಕಾರ ಕೂಡ ಲೋಕಾಯುಕ್ತದವರಿಗೆ ಇದೆ. ಆದ್ದರಿಂದ ಲೋಕಾಯುಕ್ತದ ವ್ಯಾಪ್ತಿಯಿಂದ ಸರ್ಕಾರದ ವ್ಯಾಪ್ತಿಗೆ ಇನ್ನೂ ಬಂದಿಲ್ಲ. ಲೋಕಾಯುಕ್ತದವರು ವಿಚಾರಣೆ ಮಾಡಿ ಒಂದು ಅಭಿಪ್ರಾಯಕ್ಕೆ ಬಂದು ತದನಂತರ ಈ ಅಧಿಕಾರಿ ತಪ್ಪು ಮಾಡಿದ್ದಾನೆ, ಇವರಿಗೆ ಶಿಕ್ಷೆ ಕೊಡಬೇಕು ಎಂದು ಹೇಳಿ ರಿಪೋರ್ಟ್ ಕೊಟ್ಟಮೇಲೆ, ಅದಕ್ಕೂ ಶಿಕ್ಷೆ ಕೊಡದೇ ಇರತಕ್ಕಂತಹ ಮೊಂಡುತನವನ್ನು ಸರ್ಕಾರ ಮಾಡಿದರೆ ಬಹಳ ಮಟ್ಟಿಗೆ ಅಂತಹ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅನುಕೂಲ ಆಗಬಹುದೇನೋ? ಅದೂ ಕೂಡ ವಾದಗ್ರಸ್ಥವಾದಂತಹ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ನಡೆಯುತ್ತಿರುವ ಕಾಲದಲ್ಲಿ, ಅವರೂ ಸಹ ಮೊನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಒಪ್ಪಿಕೊಂಡಿದ್ದಾರೆ. ನಾವು ಡಿಮ್ಯಾಂಡ್ಸ್ ತೆಗೆದುಕೊಳ್ಳಬೇಕು ಎಂದು ಒಪ್ಪಿಕೊಂಡಿದ್ದಾರೆ. ಇವತ್ತು ಯಾವ ಡಿಮ್ಯಾಂಡ್ಸ್ ಬರಬೇಕಾಗಿತ್ತೋ ಅದು ಬೇರೆ ವಿಚಾರ. ಪ್ರಿಸಿಡೆಂಟ್ಸ್ ಏನಾದರೂ ತಾವು ಕೊಟ್ಟರೆ ಬಹಳ ಮಟ್ಟಿಗೆ ಅನುಕೂಲ ಆಗಬಹುದು. ಪ್ರಿಸಿಡೆಂಟ್ಸ್ ಕೊಡದೇ ಇದ್ದರೆ ಏನು ಪ್ರಯೋಜನ ಬರುತ್ತದೆ?

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿ; ಬಹುಶಃ ಇದೆಲ್ಲಾ ಸಮಸ್ಯೆಗೆ ಒಳ್ಳೆಯ ಪರಿಹಾರ ನಮಗೆ ಸಿಕ್ಕಬಹುದು.

ಶ್ರೀ ಕೆ.ಎಚ್. ರಂಗನಾಥ್:- ಇಲ್ಲಿ ಸಮಸ್ಯೆ ಬಂದಿಲ್ಲ. ಕಾನೂನು ಪ್ರಕಾರ ತಾವೊಂದು ನಿಲುವಲಿ ಸೂಚನೆ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರಿಗೆ ಅದನ್ನು ನೋಡತಕ್ಕ ಅಧಿಕಾರ ಇದೆ. ಇದು ಬರುತ್ತದೋ ಇಲ್ಲವೋ ನೋಡುತ್ತಾರೆ. ನೋಡುವಾಗ ಬಜೆಟ್ ಸೆಷನ್‌ನಲ್ಲಿ ಇಂತಹ ಪರಿಸ್ಥಿತಿ ಪ್ರಸ್ತಾಪ ಆದರೆ ಯಾವ ರೂಪದಲ್ಲಿ ಮಾಡಬೇಕು ಎಂದು ಹೇಳುವಂತಹ ಅಧಿಕಾರ ಅವರಿಗೆ ಇದೆ. ಇಲ್ಲ, ನಿಲುವಳಿ ಸೂಚನೆ ಪ್ರಕಾರವೇ ಇದು ನಡೆಯಬೇಕು, ಈಗ ನಡೆಯತಕ್ಕಂತಹ ಕಾರ್ಯಕಲಾಪಗಳನ್ನು ಮುಂದೂಡಬೇಕು. ಹಾಗೆ ಮುಂದೂಡುವುದಕ್ಕೆ ಅರ್ಹವಾಗಿದೆ, ಇಂತಹ ಪ್ರಿಸಿಡೆಂಟ್ಸ್ ಈಗಾಗಲೇ ಬಹಳಷ್ಟು ಇದೆ ಎಂದು ಹೇಳಿ ತಾವು ಅದನ್ನು ತೋರಿಸಿದರೆ ಬಹಳ ಮಟ್ಟಿಗೆ ಅದು ಸಹಾಯ ಆಗಬಹುದು. ಮೊನ್ನೆ ಪತ್ರಿಕೆಯಲ್ಲೂ ನೋಡಿದೆ. ಮಾನ್ಯ ಕಾನೂನು ಸಚಿವರು ಹೇಳಿದ್ದನ್ನು ಸ್ವಲ್ಪ ಕ್ವೊಶ್ಚನ್ ಮಾರ್ಕ್ ಹಾಕಿ ನಾವೇನೋ ವಿರೋಧ ಮಾಡಿದ್ದೇವೆ, ಇದು ಮಾಡಲೇ ಕೂಡದು ಎನ್ನುವ ಅರ್ಥ ಬರುವ ರೀತಿಯಲ್ಲಿ ಪತ್ರಿಕೆಯಲ್ಲಿ ಬಂದಿದೆ. ನಾನು ಬೇಡ ಎಂದು ಹೇಳಲಿಲ್ಲ. ಈ ಕಾರಣದಿಂದ ಈ ಜೀರೋ ಹವರ್ ವಿಷಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು ಅಂದರೆ, ವಿನಹ ಬೇರೆ ಏನೂ ಹೇಳಿಲ್ಲ. ನೀವು ಸಭೆಯ ಗಮನಕ್ಕೆ ತೆಗೆದುಕೊಂಡು ಬನ್ನಿ. ಡಿಸ್ಕಷನ್ಸ್ ಆಗಕೂಡದು, ಚರ್ಚೆ ರೂಪದಲ್ಲಿ ಇದು ಬರುವುದು ಅಲ್ಲ. ತಾವು ಒಂದು ವಿಚಾರ ಹೇಳುತ್ತೀರಿ. ಸರ್ಕಾರ ತತ್‌ಕ್ಷಣದಲ್ಲಿ ಅದರ ಪರಿಸ್ಥಿತಿಯನ್ನು ನೋಡಿ ಅದರ ತೀವ್ರತೆಯನ್ನು ನೋಡಿ ತತ್‌ಕ್ಷಣವೇ ಉತ್ತರ ಕೊಡುವುದಾದರೆ ಕೊಡಬಹುದು. ಇಲ್ಲದೇ ಹೋದರೆ ನಾಲ್ಕು ದಿವಸ ಸಮಯ ತೆಗೆದುಕೊಂಡು ಉತ್ತರ ಕೊಡಬಹುದು ಎಂದು ಅಷ್ಟು ಹೇಳಿದರೆ ವಿನಹ ಕಾನೂನು ಸಚಿವರು ಇದನ್ನು ಮಾಡಬಾರದು ಎಂದು ಕೇಳಿ ನಿರಾಕರಣೆ ಮಾಡಲಿಲ್ಲ. ಹಾಗೆ ಸ್ವಲ್ಪ ಒಂದೊಂದು ಸಾರಿ ನಾವು ಮಾಡತಕ್ಕಂತಹ ಪ್ರಸ್ತಾಪ ಅದು ಬೇರೆ ರೂಪದಲ್ಲಿ ಆಗಿ ಬೇರೆ ಅರ್ಥ ಕಲ್ಪಿಸುವುದಕ್ಕೆ ಸಹಾಯ ಆಗುವುದಾದರೆ ಅದು ನಾವು ಸರಿಯಾದ ಕ್ರಮವನ್ನು ಅನುಸರಿಸಿದ ಹಾಗೆ ಆಗುವುದಿಲ್ಲ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಇವತ್ತೇನು ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ, ಇಂತಹ ವಿಚಾರ ಪ್ರಸ್ತಾಪ ಮಾಡಲಿಕ್ಕೆ ಬಜೆಟ್ ಸೆಕ್ಷನ್‌ನಲ್ಲಿ ಕೂಡ ಡಿಮ್ಯಾಂಡ್ಸ್ ಚರ್ಚೆಗೆ ಬರುವಾಗ ಮಾಡಬಹುದು. ಲೋಕಾಯುಕ್ತದವರು ಮುನಿಸಿಪಾಲಿಟಿಗಳಿಗೆ ಹೋಗಿದ್ದಾರೆ. ಆ ಡಿಮ್ಯಾಂಡ್ಸ್ ಬರುತ್ತದೆ. ಡಿಮ್ಯಾಂಡ್ಸ್ ಬಂದಾಗ ಪ್ರಸ್ತಾಪ ಮಾಡಲಿ. ಸ್ಪಷ್ಟವಾಗಿ ನಿರಾಕರಣೆ ಮಾಡದೇ ಇರತಕ್ಕ ರೀತಿಯಲ್ಲಿ ಪ್ರಸ್ತಾಪ ಮಾಡಲಿ. ಮತ್ತೆ ಇನ್ನೂ ಕೂಡ Lok Ayukta is seized of the matter. ಅವರು ಹೋಗಿದ್ದಾರೆ, ನೋಡಿದ್ದಾರೆ. ಇನ್ನೂ ಏನು ಮಾಡುತ್ತೇವೆಂಬ ವಿಚಾರವನ್ನು ಸಾರ್ವಜನಿಕರ ಮುಂದೆ ಇಟ್ಟಿಲ್ಲ ಅಥವಾ ಅವರ ವ್ಯಾಪ್ತಿಗೆ ಏನು ಮಾಡಬೇಕು ಎನ್ನುವುದರ ಬಗ್ಗೆ ವಿಚಾರ ಹೇಗೆ ಮಾಡಿದ್ದಾರೋ ಗೊತ್ತಿಲ್ಲ. ಅಂತಹವು ಇರುವಾಗ ತಾವು ತಕ್ಷಣ ಇದನ್ನು ನಿಲುವಳಿ ಸೂಚನೆ ಮುಖಾಂತರ ಪ್ರಸ್ತಾಪ ಮಾಡುತ್ತೇನೆಂದರೆ ಏನು ಪ್ರಸ್ತಾಪ ಮಾಡುವುದು? ಅವರು ಅಲ್ಲಿ ಹೋಗಿದ್ದು ತಪ್ಪು ಎಂದು ಪ್ರಸ್ತಾಪ ಮಾಡುವುದೇ? ಅವರು ಮಾಡಿದ್ದು ತಪ್ಪು ಎಂದು ಪ್ರಸ್ತಾಪ ಮಾಡುವುದೇ? ಅವರು ಹೋದ ಮೇಲೆ ನೋಡಿದ್ದಾರೆ. 80 ಕೋಟಿ ರೂಪಾಯಿಗಳ ವಿಚಾರ ಹೇಳಿದ್ದಾರೆ, 40

ಕೋಟಿ ರೂಪಾಯಿಗಳ ವಿಚಾರ ಹೇಳಿದ್ದಾರೆ. ಯಾರು, ಏನು? ಏಕೆ ಮಾಡಿದ್ದಾರೆ? ಹೇಗೆ ಮಾಡಿದ್ದಾರೆ, ಅದು ಅವರ ವ್ಯಾಪ್ತಿಗೆ ಬಂದಿದೆ. ಅವರು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿ ಮಾಡಿ ಎಲ್ಲ ಕ್ರಮ ಮಾಡಬೇಕಾಗುತ್ತದೆ. ಆದಾದ ಮೇಲೆ ಒಂದು ಅಭಿಪ್ರಾಯಕ್ಕೆ ಬಂದು ಸರ್ಕಾರ ಮೊಂಡುತನದಿಂದ ಅದಕ್ಕೇನೂ ಮಾಡದೇ ಹೋದರೆ ಬಹಳ ಮಟ್ಟಿಗೆ ಇದು ತತ್ ಕ್ಷಣವೇ ನಡೆದಂತಹದು ಹೇಳಿ ವಿಚಾರ ಮಾಡಬಹುದು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:- ಲೋಕಾಯುಕ್ತದವರು ಮಾಡಿದ್ದೆಲ್ಲಾ ಸರಿ ಇಲ್ಲ ಎಂಬುದು ತಮ್ಮ ಅಭಿಪ್ರಾಯವೇ?

ಶ್ರೀ ಡಿ.ವಿ. ಸದಾನಂದಗೌಡ:- ಸನ್ಮಾನ್ಯ ಚಂದ್ರೇಗೌಡರೂ ಕೂಡ ಅವತ್ತು ಈ ಕುರ್ಚಿಯಲ್ಲಿ ಕುಳಿತುಕೊಂಡಿದ್ದರು. ಅವರು ಆ ಕಾಲದಲ್ಲಿ ಮಾತನಾಡಿದ ಕೆಲವು ಸಂಗತಿಗಳನ್ನು ನಾವು ಪರಿಶೀಲನೆ ಮಾಡಿದರೆ ಪ್ರಾಯಶಃ ಇದಕ್ಕೆ ಉತ್ತರ ಸಿಗಬಹುದು ಎಂದು ನನಗನ್ನಿಸುತ್ತದೆ. ಸನ್ಮಾನ್ಯ ಸಿಂಧ್ಯರವರ ಕೈಕೆಳಗೆ ಉಪ-ನಾಯಕರಾಗಿದ್ದವರಿಗೆ ಕೇಳಿದೆ, ಇಂತಹ ಬೇಕಾದಷ್ಟು ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ. ಚಂದ್ರೇಗೌಡರು ಆಗಾಗ ಮಾಡಿದ್ದಾರೆ. ಇದು ಒಂದು ಪ್ರಿಸಿಡೆಂಟ್ ಆಗಿದೆ. ಸದನದಲ್ಲಿ ಚರ್ಚೆಗಳಾಗಿವೆ.

ಅಧ್ಯಕ್ಷರು:- ಆ ಪದವನ್ನು ಕಡತದಿಂದ ತೆಗೆದುಹಾಕಿ.

Sri D.B. Chandre gowda:- I do not deny that this is a matter of public importance. These public importance are also government by certain restrictions like Rule ;

> "No motion which seeks to raise discussion on a matter pending before any statutory tribunal or statutory authority performing any judicial or quasifjudicial functions."

Lok Ayuktha is a quasi judicial authority.

ಇಂತಹ ವಿಚಾರಗಳಿಗೆ ರಿಸ್ಟ್ರಿಕ್ಷನ್ಸ್ ಇದೆ ಎಂದು ನಾನು ಹೇಳಿದೆ. ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಮೀನಿಗೆ ಈಜುವುದು ಕಲಿಸಬೇಕಾ? You know much better. My only point is not under Adjournment Motion. That is all.

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ನಮ್ಮ ರೂಲ್ಸ್ ಬುಕ್‌ನಲ್ಲಿ ಹೇಳುವ ಪ್ರಕಾರ ಪುಟ 26 ರಲ್ಲಿ ಒಂದು ಪ್ಯಾರಾ ಓದತ್ತೇನೆ.

"Provided that the Speaker may in his discretion allow such matter being raised in the House as it concerned with the procedure or subject or stage of enquiry if the Speaker is satisfied that it is not likely to prejudice the consideration of such matter by the statutory tribunal, statutory authority, commission or court of enquiry.

ಮಾನ್ಯ ಕೆ.ಹೆಚ್. ರಂಗನಾಥ್‌ರವರು ಏನುಹೇಳಿದರು ಎಂದರೆ, ಲೋಕಾಯುಕ್ತ ಹೋಗಿದ್ದು ತಪ್ಪಾ, ಲೋಕಾಯುಕ್ತ ಮಾಡಿರತಕ್ಕಂಥಾದ್ದು Lok Ayuktha is seized of the mattter ಅವರು ಮಾಡಿರತಕ್ಕಂಥ ರೈಡ್ ತಪ್ಪಾ, ಅವರ ಕೆಲಸ ತಪ್ಪಾ ಅನ್ನತಕ್ಕಂತಹ ತೀರ್ಮಾನಕ್ಕೆ ನೀವು ಬರುವುದರಿಂದ ಮಾತನಾಡಬೇಕೆಂದಿದ್ದೀರಿ ಎಂದು. ನಾನು ಅದನ್ನು ಮಾತನಾಡಬೇಕೆಂದೇನೂ ಇಲ್ಲ. ನಾವು ಮಾತನಡಾಡಬೇಕೆಂಬ ಅಂಶವೇ ಬೇರೆ. ಈಗಾಗಲೇ ಅಲ್ಲಿ ನಡೆದಿರತಕ್ಕಂತಹ ಭ್ರಷ್ಟಾಚಾರ ಅದಕ್ಕೆ ಕೊಡಬೇಕಾಗಿರತಕ್ಕಂತಹ ಶಿಕ್ಷೆ, ತನಿಖೆ, ಅದು ಲೋಕಾಯುಕ್ತದವರು ಮಾಡಿಕೊಂಡು ಹೋಗಲಿ. ಆದರೆ ಸರ್ಕಾರದ ವೈಫಲ್ಯತೆ ಎಲ್ಲಿದೆ ಎಂಬುದನ್ನು ನಾವು ತಿಳಿಸಬೇಕಾಗುತ್ತದೆ. ಎರಡು ಕೋಟಿ, ರೂ. ಮೂರು ಕೋಟಿ ರೂ. ಅಥವಾ 10 ಲಕ್ಷ ರೂಪಾಯಿ ವಿಷಯ ಆಗಿದ್ದರೆ ಅದು ಬೇರೆ. ಇದು ಸುಮಾರು 240 ರಿಂದ 290 ಕೋಟಿ ರೂಪಾಯಿಗಳಷ್ಟು ಇನ್‌ವಾಲ್ವ್ ಆಗಿರುವ ದುಡ್ಡು. ಈ ದುಡ್ಡು ಮುನಿಸಿಪಾಲಿಟಿಯವರು ಕಲೆಕ್ಟ್ ಮಾಡಿರತಕ್ಕಂತಹ ದುಡ್ಡು ಅಲ್ಲ. ಲೋಕಾಯುಕ್ತದ ಮುಂದಿರುವ ಪಿಟಿಷನ್‌ನಲ್ಲಿ ನಾನು ಹೆಸರುಗಳನ್ನು ಓದುವುದಕ್ಕೆ ಹೋಗುವುದಿಲ್ಲ, ಇವರೆಲ್ಲಾ ಸರ್ಕಾರಕ್ಕೆ ಸಂಬಂಧಪಟ್ಟವರೋ ಇಲ್ಲವೋ ಎಂಬುದನ್ನು ತಾವು ದಯವಿಟ್ಟು ವಿಚಾರ ಮಾಡಿ. ಲೋಕಾಯುಕ್ತದ ಮುಂದೆ ಹಾಕಿರತಕ್ಕಂತಹ ಪಿಟಿಷನ್ ಇದೆ. ಸಚಿವರೊಬ್ಬರು, ಅವರ ಹೆಸರು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಒಬ್ಬ ಸಚಿವರ ಮೇಲೆ ನಾವು ಛಾರ್ಜ್ ಮಾಡಬೇಕಾದರೆ ನಾವು ಬರೆದು ಕೊಡಬೇಕಾಗುತ್ತದೆ. ಇಬ್ಬರು ಐಎಎಸ್ ಅಧಿಕಾರಿಗಳು, ಖಜಾನೆ ನಿರ್ದೇಶಕರು, ಎಂಟು ಜನ ಜಿಲ್ಲಾ ನೊಂದಣಾಧಿಕಾರಿಗಳು ಇವರೆಲ್ಲಾ ನೇರವಾಗಿ ಸರ್ಕಾರದ ಕಂಟ್ರೋಲ್‌ನಲ್ಲಿರತಕ್ಕಂಥವರಲ್ಲವಾ? ಇವರೆಲ್ಲಾ ನೇರವಾಗಿ ಸರ್ಕಾರದ ಕಂಟ್ರೋಲ್ ನಲ್ಲಿರತಕ್ಕಂಥವರು ಮಾಡಿರತಕ್ಕಂತಹ ಕೆಲಸವನ್ನು ....

Sri K.H. Ranganath: I am sorry for interruption. why do you want to stall the Lok Ayuktha by this discussion?

Sri P.G.R. Sindhia:- No, ಮಾನ್ಯ ರಂಗನಾಥ್‌ರವರು ತಪ್ಪು ತಿಳುವಳಿಕೆ ಇಟ್ಟುಕೊಂಡು ಮಾತನಾಡುತ್ತಿದ್ದಾರೆ. We are felicitating Lok Ayuktha. We are complimenting Lok Ayuktha.

ಶ್ರೀ ಕೆ.ಹೆಚ್. ರಂಗನಾಥ್:- ಆ ಇಲಾಖೆ ಮೇಲೆ ಚರ್ಚೆ ಬರುವಾಗ, ಚರ್ಚೆ ಬಂದಾಗ ಕೂಲಂಕಷವಾಗಿ ಚರ್ಚೆ ಮಾಡಿ. ಅಪರಾಧಿ ಸ್ಥಾನದಲ್ಲಿ ಸರ್ಕಾರವನ್ನು ನಿಲ್ಲಿಸಿ, ಯಾರು ಮಾಡಿದ್ದಾರೆ ಅವರನ್ನು ನಿಲ್ಲಿಸಿ, ಪ್ರಶ್ನೆ ಏನೆಂದರೆ, ನಿಲುವಳಿ ಸೂಚನೆಯ ಅಸ್ತ್ರ ಇರತಕ್ಕಂಥದ್ದು ನಡೆಯುತ್ತಿರತಕ್ಕ ಡಿಸ್ಕಷನ್ ಅಂದರೆ ಬೇಡಿಕೆಗಳ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕಿ ತೆಗೆದುಕೊಳ್ಳತಕ್ಕಂಥದ್ದು ಸಾಧ್ಯವೇ? ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಶಕ್ದರ್ ರವರ ಪುಸ್ತಕ ನೋಡಿದರೆ ಅದನ್ನೇ ಹೇಳುತ್ತದೆ. ನಿಮಗೆ ಬೇಕಾದಷ್ಟು ಅವಕಾಶ ಇರುವಾಗ make use of that why do you want to use this? ಅಡ್ಜರ್ನ್‌ಮೆಂಟ್ ಮೋಷನ್‌ನ ವ್ಯಾಪ್ತಿಯೇ ಬೇರೆ, ಅದರ ಅರ್ಥವೇ ಬೇರೆ ಆಗುತ್ತದೆ. It is cencuring the Government.

Are we at that stage? By using that autority, are we not stalling the enquiry that is pending there?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಹೆಚ್. ರಂಗನಾಥ್ ರವರು ಎರಡು ವಿಚಾರಗಳನ್ನು ಎತ್ತಿದ್ದಾರೆ. ಬಜೆಟ್ ಸೆಷನ್‌ನಲ್ಲಿ ಈ ತರಹದ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಇದೆ. ತಾವು ಅಧ್ಯಕ್ಷರಾಗಿದ್ದವರು ಕಡತಗಳನ್ನು ತೆಗೆದು ನೋಡಿ, ಒಂದಲ್ಲ ಎರಡಲ್ಲ, ಹತ್ತಾರು ಅಡ್ಜನ್‌ಮೆಂಟ್ ಮೋಷನ್‌ಗಳನ್ನು ಈ ಸದನದಲ್ಲಿ ತೆಗೆದುಕೊಂಡಿರತಕ್ಕಂತಹ ಪ್ರಿಸಿಡೆಂಟ್ ಈ ಹೌಸ್‌ನಲ್ಲಿ ಇದೆ. ಇಡೀ ಇತಿಹಾಸದಲ್ಲಿ ಎಷ್ಟು ಅಲೋ ಮಾಡಿದ್ದೀರಿ? ಕಂಬಾಲಪಲ್ಲಿ ಒಂದು ಬಿಟ್ಟರೆ ಸರ್ಕಾರದವರು ಯಾವ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಒಪ್ಪಿಕೊಂಡಿಲ್ಲ. ಸರ್ಕಾರಕ್ಕೆ ಎಂಬರಾಸ್‌ಮೆಂಟ್ ಆಗುತ್ತದೆ ಎಂದು ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿರಿ. ಏಕೆಂದರೆ ಅದು ನಿಮಗೆ ಕನ್‌ವೀನಿಯೆಂಟ್ ಆಗಿತ್ತು. ಎರಡನೇ ಪಾಯಿಂಟ್‌ಗೆ ಬರುತ್ತಿದ್ದೇನೆ. ಲೋಕಾಯುಕ್ತದವರು ರೈಡ್ ಮಾಡಿರತಕ್ಕಂಥಾದ್ದು, ಅಕ್ರಮಗಳು ಪತ್ತೆ ಮಾಡಿರತಕ್ಕಂಥಾದ್ದರ ಬಗ್ಗೆ ನಾವು ಟಚ್ ಮಾಡುತ್ತಿಲ್ಲ. as far as I am concerned, I am not touching that subject. 290 ಕೋಟಿ ರೂಪಾಯಿಗಳು ಸರ್ಕಾರಿ ಟ್ರೆಜರಿಗೆ ಹಾನಿಯಾಗಿರುವುದು, ಎಕ್ಸೈಸ್ ಬಿಡುಗಡೆಯಾಗಿರುವುದು, ಇದಕ್ಕೆ ಕಾರಣಕರ್ತರು ಯಾರು? ಇದನ್ನು ನಾವು ನಿಲುವಳಿ ಸೂಚನೆ ಮೂಲಕ ತರಬೇಕೆಂದು ಹೇಳುತ್ತಿರುವುದು. ಇದು ಪ್ರಿಲಿಮಿನರಿ ಸಬ್ಮಿಷನ್. ಫೈನಲ್ ಅಥಾರಿಟಿ ನಿಮಗೆ ಇದೆ. ಅವರಾದ ಮೇಲೆ ನನಗೆ ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶ ಮಾಡಿಕೊಡಿ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈ ಒಂದು ನಿಲುವಳಿ ಸೂಚನೆ ಬಗ್ಗೆ ಚರ್ಚೆ ಮಾಡಬೇಕು ಅಥವಾ ಬೇಡ ಎಂಬ ವಿಷಯ ತಮ್ಮ ಮುಂದಿದೆ. ನಿಲುವಳಿ ಸೂಚನೆ ತರಬೇಕಾದರೆ ನಿಯಮ 60ರ ಪ್ರಕಾರ ನಿಲುವಳಿ ಸೂಚನೆ ತರಬೇಕು. Adjournment motion, in the strict sense, is a censure motion. Are you going to censure Lok Ayuktha by way of this motion? ಇಲ್ಲಿ ನಾವು ಅವರು ಕೊಟ್ಟಿರುವಂತಹ ನಿಲುವಳಿ ಸೂಚನೆಯ ಟಿಪ್ಪಣಿಯನ್ನು ನೋಡಿದೆ. ಅದರಲ್ಲಿ ಎರಡು ವಿಷಯಗಳಿಗೆ ಸರ್ಕಾರದ ಮೇಲೆಯೂ ಇದೆ, ಲೋಕಾಯುಕ್ತದ ಬಗ್ಗೆಯೂ ಚರ್ಚೆ ಇದೆ. I want to know whether any member of this House including myself or the entire House, can censure the action or the functions of the Lok Ayuktha under Rule , It is not pssible. ಐಎಎಸ್ ಅಧಿಕಾರಿಗಳನ್ನು ಮಾಡುವುದಕ್ಕೆ ಅಧಿಕಾರ ಇದೆ, ಗುಮಾಸ್ತರಿಗೆ ಮಾಡುವುದಕ್ಕೆ ಅಧಿಕಾರ ಇದೆ. Bring a separate motion against the Government, we will agree. ಸರ್ಕಾರ ಒಪ್ಪಿಕೊಳ್ಳುತ್ತದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ನಿಯಮಗಳ ದೃಷ್ಟಿಯಿಂದ, ಕಾನೂನಿನ ದೃಷ್ಟಿಯಿಂದ ಸರ್ಕಾರದ ಇಂತಹ ಒಬ್ಬ ಅಧಿಕಾರಿ ವಿರುದ್ಧ ಇಂತಹ ಮಂತ್ರಿ ವಿರುದ್ಧ ಇಂತಹ ಮೋಷನ್ ತರುತ್ತಿದ್ದೇವೆಂದು ಹೇಳುವುದಾದರೆ I have no objection. It is tenable. Atleast it is maintainable. ಅಲೋ ಮಾಡುವುದು ಬಿಡುವುದು ನಿಮ್ಮ ಇಷ್ಟ. ಆದರೆ ಇಲ್ಲಿ ಲೋಕಾಯುಕ್ತದ ಬಗ್ಗೆ ಮಾತನಾಡುವಂತಹ

ಒಂದು ಪರಿಸ್ಥಿತಿಯನ್ನು ಸೃಷ್ಟಿ ಮಾಡಿ ಸೆನ್ಸಾರ್ ಮೋಷನ್‌ಗೆ ಸಮಾನವಾದ ಕಾನೂನಿನ ಕೆಳಗಡೆ ಚರ್ಚೆ ಮಾಡುವುದಕ್ಕೆ ಹೊರಟರೆ ಅದು ಸರ್ವಥಾ ಸಾಧ್ಯವಿಲ್ಲವೆಂಬುದು ನನ್ನ ಮೊದಲನೇ ಅಭಿಪ್ರಾಯ.

ಆ ಎರಡೂ ರೂಲ್‌ನ್ನು ಶಕ್ದರ್ ಅಂಡ್ ಕೌಲ್‌ನ್ನು ಸೇರಿಸಿದಂತೆ ಎಲ್ಲಾ ಓದಿ ನಾನು ಅದಕ್ಕೆ ನಿಯಮ 69ರ ಪ್ರಕಾರ ನಾನು ಒಂದು ನೋಟೀಸನ್ನು ಕೊಟ್ಟಿದ್ದೇನೆ. ಅತ್ಯಂತ ಎಚ್ಚರಿಕೆಯಿಂದ ಪದವನ್ನು ಉಪಯೋಗಿಸಿದ್ದೇನೆ. ಲೋಕಾಯುಕ್ತರ ಕಾರ್ಯವೈಖರಿಯಿಂದ ಅವರ ಕ್ರಿಯಾಶೀಲತೆಯಿಂದ ಆಗಿರುವ ಪರಿಣಾಮದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಕೇಳಿದ್ದೇನೆ. ಆದ್ದರಿಂದ ದಯಮಾಡಿ ಅವರನ್ನು ಸೆನ್ಸಾರ್ ಮಾಡಲಿಕ್ಕೆ ಈ ಮೋಷನ್ ಕೆಳಗೆ, ನಿಯಮ 60ರ ಕೆಳಗಡೆ ಸಾಧ್ಯವಿಲ್ಲ. ಇದು ನನ್ನ ಅಭಿಪ್ರಾಯ. ಇದನ್ನು ಮಾಡುವುದು ಬಿಡುವುದು ನಿಮಗೆ ಬಿಟ್ಟಿದ್ದು. ನಾನು ನನ್ನ ಅಭಿಪ್ರಾಯವನ್ನು ಹೇಳಿ 69ರ ನಿಯಮದ ಕೆಳಗೆ ಲೋಕಾಯುಕ್ತರು ತೆಗೆದುಕೊಂಡಿರುವ ಕ್ರಮದಿಂದ ಈ ರಾಜ್ಯದ ಆಡಳಿತದ ಮೇಲೆ ಸಾರ್ವಜನಿಕ ಕ್ಷೇತ್ರದ ಬಗ್ಗೆ ಆಗಿರುವಂತಹ ಪರಿಣಾಮ ಮೇಲೆ ಚರ್ಚೆ ಮಾಡಲಿಕ್ಕೆ ನನಗೆ ಮತ್ತು ನನ್ನ ಸ್ನೇಹಿತರಿಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ತಮ್ಮ ನಾಯಕರು ಮಾತನಾಡುತ್ತಿದ್ದಾರೆ. ಪ್ರಿಲಿಮಿನರಿ ಸಬ್-ಮಿಷನ್‌ಗೆ ಒಂದು ಗಂಟೆ, ಎರಡು ಗಂಟೆ ಆದರೆ ಹೇಗೆ?

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಕಾನೂನು ಗೊತ್ತಿಲ್ಲದೇ ಇರುವಂತಹವರು ನಾವೆಲ್ಲಾ ಇಲ್ಲಿ ಬಂದಿದ್ದೇವೆ. ಎಲ್ಲರೂ ಮಾತನಾಡಿದ್ದಾರೆ. ಈ ನಿಯಮಾವಳಿಗಳೆಲ್ಲಾ ಭ್ರಷ್ಟಾಚಾರಗಳನ್ನು ತಡೆಯುವುದಕ್ಕೋಸ್ಕರ ಮಾಡಿರತಕ್ಕಂಥ ನಿಯಮಗಳು ಎಂದು ನಾವೆಲ್ಲಾ ಅಂದುಕೊಂಡಿದ್ದೇವೆ. ಬ್ರಷ್ಟಾಚಾರಿಗಳ ವಿರುದ್ಧ ಮಾತನಾಡುವುದನ್ನು ತಡೆಯುವುದಕ್ಕಾಗಿ ಈ ನಿಯಮಗಳು ಇವೆ ಎಂದು ನಾನು ಅಂದುಕೊಂಡಿಲ್ಲ. ದಯಮಾಡಿ ನಿಯಮ 63ರಲ್ಲಿ ತಮ್ಮ ವಿವೇಚನೆಗೆ ಅವಕಾಶ ಇದೆ. ಆದ್ದರಿಂದ ರಾಜ್ಯದ ಜನತೆಯ ಪರವಾಗಿ, ರಾಜ್ಯದ ಆರ್ಥಿಕ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ತಾವು ತಮ್ಮ ವಿವೇಚನೆ ಪ್ರಕಾರ ಅವಕಾಶ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು:- ಮಾನ್ಯ ರೆಡ್ಡಿಯವರೇ, ತಮ್ಮ ನಾಯಕರು ಮಾತನಾಡಿದ್ದಾರೆ. ತಮ್ಮ ಪಕ್ಷದವರು 3-4 ಜನ ಮಾತನಾಡಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಅವರ ಸೀಟೂ ಬದಲಾಗಿದೆ, ಅವರ ಕೋಟೂ ಬದಲಾಗಿದೆ. ಅವರು ಸಿಗ್ನೇಟರಿನೂ ಅಲ್ಲ. ಅವರಿಗೆ ಹೇಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೀರಿ?

ಶ್ರೀ ಎಸ್.ಎಚ್. ಪೂಜಾರಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ವೈ.ಕೆ. ರಾಮಯ್ಯನವರು ಮಾತನಾಡಲು ಅವಕಾಶ ಮಾಡಿಕೊಟ್ಟರಿ. ಅವರು ಸಹಿ ಮಾಡಿದ್ದಾರಾ?

ಶ್ರೀ ವೈ.ಕೆ. ರಾಮಯ್ಯ:- ನಾನು ನೋಟೀಸ್ ಕೊಟ್ಟಿದ್ದೇನೆ. ನಾನು ಸಹಿ ಸಿಗ್ನೇಟರಿ ಅಷ್ಟೇ ಅಲ್ಲ. I am a mover under Rule 69 . You must know it. ನಾನು ಅಷ್ಟು ಎಚ್ಚರಿಕೆ ತಪ್ಪುವುದಿಲ್ಲ ಈ ವಿಷಯದಲ್ಲಿ. ಬರವಣಿಗೆಯ ಮುಖಾಂತರ ನನ್ನ ಸ್ವಂತ ರುಜು ಮಾಡಿ ನೋಟಿಸ್ ಕೊಟ್ಟಿದ್ದೇನೆ. I have every right to talk. Why you have mistaken it? I think you have not understood.

ಅಧ್ಯಕ್ಷರು:- ಅವರು ನಿಯಮ 69ರ ಅಡಿಯಲ್ಲಿ ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಮಾನ್ಯ ಅಧ್ಯಕ್ಷರೇ, ಏನಾದರೂ ಸ್ವಲ್ಪ ಗೌರವವನ್ನು ಕಾಪಾಡಿದ್ದರೆ ಸರ್ಕಾರದ್ದು, ಅದು ಲೋಕಾಯುಕ್ತರು ಮಾತ್ರ. ಅದಕ್ಕೆ ನಾವು ಅವರಿಗೆ ಗೌರವ ಸಲ್ಲಿಸಬೇಕಾಗುತ್ತದೆ. ಭ್ರಷ್ಟಾಚಾರ ತಡೆಗಟ್ಟುವ ಬಗ್ಗೆ ಸರ್ಕಾರದವರು ಇದುವರೆಗೂ ಏನೂ ಮಾಡುವುದಕ್ಕೆ ಆಗಲಿಲ್ಲ. ಇದುವರೆಗೂ, ಅದು ಇನ್ನೂ ಜಾಸ್ತಿಯಾಗುತ್ತಿದೆ. ಅಂತಹ ಒಂದು ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಲೋಕಾಯುಕ್ತರವರು ಕೆಲಸ ಮಾಡುತ್ತಿದ್ದಾರೆ. ಬಹುಶಃ ನಾವೆಲ್ಲಾ ಯುನಾನಿಮಸ್ ಆಗಿ ಚರ್ಚೆ ಮಾಡಬೇಕು. ಮಾನ್ಯ ಕಾನೂನು ಸಚಿವರಿಂದ ಇದಕ್ಕೆ ಯಾವ ಅಬ್ಜೆಕ್ಷನ್ ಇಲ್ಲದೆ, ಅದಕ್ಕೆ ತಾವು ಅನುಮತಿ ಕೊಟ್ಟು ಚರ್ಚೆ ಮಾಡಿದರೆ ಅವರ ಗೌರವ ಜಾಸ್ತಿಯಾಗುತ್ತದೆ. ಇಲ್ಲ ಬಚ್ಚಿಡಬೇಕು ಎನ್ನುವುದಾದರೆ ಲೋಕಾಯುಕ್ತರನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ ಆದ್ದರಿಂದ ನಾನು ಹೇಳುತ್ತಿದ್ದೇನೆ ಮಾನ್ಯ ಚಂದ್ರೇಗೌಡರು ಇದನ್ನು ಸ್ವಾಗತಃ ಮಾಡಿ ಚರ್ಚೆ ಮಾಡಿ ಎಂದು ಹೇಳಬೇಕು.

ಅಧ್ಯಕ್ಷರು:- ಅವರು ಬೇಡ ಎಂದು ಹೇಳುತ್ತಿಲ್ಲ; ಬೇರೆ ರೂಪದಲ್ಲಿ ತನ್ನಿ ಎಂದು ಹೇಳುತ್ತಿದ್ದಾರೆ ಅಷ್ಟೇ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ಆದ್ದರಿಂದ ತಾವು ಅನುಮತಿ ಕೊಡಿ. ಇದು ಸೆನ್ಸಾರ್ ಮೋಷನ್ ಅಲ್ಲ. We have to discuss about the activities and also about the action of the Lokayukta.

ಶ್ರೀ ಡಿ.ಬಿ. ಚಂದ್ರೇಗೌಡ:- ನೋಟೀಸ್‌ನಲ್ಲಿ ಏನು ಇದೆ ಎಂಬುದನ್ನು ಹೇಳಿ. Notice under what provisions?

Sri K.N. Subbareddy:- I am making preliminary submissions.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೇ ತಾವು ನಮ್ಮ ಮಾತು ಯಾರದ್ದೂ ಕೇಳಬೇಡಿ. ನಿಮ್ಮ ಕ್ಲಾಸ್‌ಮೇಟ್‌ದ್ದು ರೆಕಮೆಂಡೇಷನ್; ದಯವಿಟ್ಟು ಅಲೋ ಮಾಡಿ.

ಶ್ರೀ ಕೆ.ಎಚ್. ರಂಗನಾಥ್:- ಅವರ ಕ್ಲಾಸ್‌ಮೇಟ್ ಆಗಿದ್ದು ಸ್ಪೀಕರ್ ತಪ್ಪಾ? ಏನೋ ಅನಿವಾರ್ಯವಾಗಿ ಅವರ ಕ್ಲಾಸ್‌ಮೇಟ್ ಆದರು.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ:- ಅದಕ್ಕೆ ಅವರು ಮಾತನಾಡುವಾಗ ಖುಷಿಯಾಗಿ ಕೇಳುತ್ತಿರುತ್ತಾರೆ.

ಶ್ರೀ ಕೆ.ಎಚ್. ರಂಗನಾಥ್:- ಖುಷಿಯಾಗಿ ಅಲ್ಲ ಕೇಳಿದ್ದು, classmate ಅಂತಅಂದರಲ್ಲಾ ಅದಕ್ಕೆ ಖುಷಿ ಅದರು ಅಷ್ಟೇ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:- ನಾನು ಮಾತನಾಡುವಾಗ ಯಾವಾಗಲೂ ಮಾನ್ಯ ರಂಗನಾಥ್‌ರವರು ಅಬ್ಜೆಕ್ಷನ್ಸ್ ರೈಜ್ ಮಾಡುತ್ತಾರೆ ಏಕೋ?

ಅಧ್ಯಕ್ಷರು:- ಇಂಡಿವಿಜ್ಯುಯಲ್ ಆ್ಯಸ್ ಪರ್ಷನ್ಸ್ ಮಾಡಬೇಡಿ ದಯವಿಟ್ಟು.

Sri K.H. Ranganath:- I am sorry for his ignorance. Rule 60 is not a censure motion ಎಂದು ಹೇಳಬಿಟ್ಟರಲ್ಲಾ. ಇದಕ್ಕೆ ನಾನು ಏನು ಹೇಳಬೇಕು?

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ:- ಮಾನ್ಯ ರಂಗನಾಥ್ ರವರು ಬಹಳ ಅನುಭವಶಾಲಿಗಳು. ಅವರು ಎಲ್ಲದ್ದಕ್ಕೂ ಅಬ್ಜೆಕ್ಷನ್ಸ್ ಮಾಡುತ್ತಾರೆ. That is what we feel. I am sorry for that.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಯಾವ ಯಾವ ಸಂದರ್ಭದಲ್ಲಿ ನಿಲುವಳಿ ಸೂಚನೆಯ ಮೂಲಕ ವಿಷಯಗಳು ಚರ್ಚೆಯಾಗಿವೆ ಎನ್ನತಕ್ಕಂಥದ್ದರ ವಿವರಗಳನ್ನು ಮಾನ್ಯ ಸಚಿವರಾದ ಶ್ರೀರಂಗನಾಥ್‌ರವರು ಕೇಳಿದರು. ಹಿಂದೆ 28-2-2001ರಲ್ಲಿ ಬೆಂಬಲ ಬೆಲೆ ಮತ್ತು ರೈತರ ಆತ್ಮಹತ್ಯೆಯ ಬಗ್ಗೆಯೇ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದವು. ಆ ನಿಲುವಳಿ ಸೂಚನೆಯ ಮುಖಾಂತರ ಈ ಒಂದು ಸದನದಲ್ಲಿ ಚರ್ಚೆ ನಡೆದಿದೆ. ಆಮೇಲೆ 28-3-2002ರಲ್ಲಿ ರಂದು ನಿಲುವಳಿ ಸೂಚನೆಯ ಮುಖಾಂತರವೇ ಬರಗಾಲದ ಬಗ್ಗೆ ಚರ್ಚೆ ಪ್ರಾರಂಭ ಮಾಡಿದ್ದು, ನಂತರ ತಾವು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದಿರಿ. ಆದರೆ ನಿಲುವಳಿ ಸೂಚನೆಯ ಮುಖಾಂತರವೇ ಸಾರ್ವಜನಿಕ ಮಹತ್ವದ ವಿಷಯಗಳು ಚರ್ಚೆಯಾಗಿವೆ. ಮಾನ್ಯ ರಂಗನಾಥ್‌ರವರು ಹೇಳಿದರು ಈ ಒಂದು ಬಜೆಟ್ ಅಧಿವೇಶನ ಮತ್ತು ಬೇರೆ ಬೇರೆ ವಿಷಯಗಳು...

Sri K.H. Ranganath:- I think I have not made my point quite clear. ಬಹಳ ಮಟ್ಟಿಗೆ ನಾನು ತಮಗೆ ತಿಳುವಳಿಕೆ ಹೇಳಲಿಲ್ಲವೆಂದು ಕಾಣುತ್ತದೆ. ಆ ತಪ್ಪು ನನ್ನದು. ನಾನು ಏನು ಹೇಳಿದೆ ಅಂದರೆ ನಿಯಮ 60ರಲ್ಲಿ ನಡೆಯತಕ್ಕಂಥ ಬಿಜಿನೆಸ್ಸ್‌ನ್ನು ಮುಂದಕ್ಕೆ ಹಾಕಿ ಇಲ್ಲಿ ತೆಗೆದುಕೊಂಡು ಅಂದರೆ ಯಾವ ಬಜೆಟ್ ಅಧಿವೇಶನದಲ್ಲಿ ಡಿಮ್ಯಾಂಡ್ಸ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಇರುವ ಸಮಯದಲ್ಲಿ ಇಂತಹ ಪರಿಸ್ಥಿತಿಯಲ್ಲಿಯೂ ಕೂಡ ಮುಂದಕ್ಕೆ ಹಾಕಿ ಚರ್ಚೆಗೆ ತೆಗೆದುಕೊಂಡಿರುವ ಯಾವುದಾದರೂ ಪ್ರಿಸಿಡೆಂಟ್ಸ್ ಇದ್ದರೆ ತಾವು ಕೊಡಿ ಎಂದು ಕೇಳಿದೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಈ ನಿಲುವಳಿ ಸೂಚನೆಯ ಮುಖಾಂತರ ನಾವು ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ಅಧ್ಯಕ್ಷರು ಬೇರೆ ರೂಪಕ್ಕೆ ಕನ್‌ವರ್ಟ್ ಮಾಡಿ ಚರ್ಚೆಯನ್ನು ಮುಂದುವರಿಸಿದ್ದರ ಬಗ್ಗೆ ನಾನು ಹೇಳುತ್ತಿದ್ದೇನೆ. ನಿಲುವಳಿ ಸೂಚನೆಯ ಮುಖಾಂತರವೇ ಚರ್ಚೆ ಮಾಡಿದೆವು ಎಂದು ಅಲ್ಲ. ಅದರ ಮೇಲೆ ಚರ್ಚೆ ಪ್ರಾರಂಭವಾಗಿ ಪ್ರಿಲಿಮಿನರಿ ಹಂತದಲ್ಲಿ

ಅದರ ಬಗ್ಗೆ ಸಬ್‌ಮಿಷನ್ ಆದಮೇಲೆ ಒಂದು ಹಂತದಲ್ಲಿ ಮಾನ್ಯ ಅಧ್ಯಕ್ಷರು ನೆಕ್ಸ್ಟ್ ಡೇ ಅ ಚರ್ಚೆ ಮುಂದುವರಿಯುವಂತಹ ಸಂದರ್ಭ ಬಂದಾಗ ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ಚರ್ಚೆ ಮುಂದುವರಿಸಿದ್ದು ಆ ಬಗ್ಗೆ ಸಾಕಷ್ಟು ಉದಾಹರಣೆಗಳು ಇದೆ. ಮತ್ತೊಂದು ವಿಚಾರ ನಾನು ಇಲ್ಲಿ ಹೇಳುವಂತಾದ್ದು ಎಂದರೆ ಎರಡು ಅಧಿವೇಶನಗಳ ಹಿಂದೆ ಈ ಒಂದು ನಕಲಿ ಛಾಪಾ ಕಾಗದದ ಹಗರಣದ ಬಗ್ಗೆಯೂ ನಾವು ನಿಲುವಳಿ ಸೂಚನೆಯ ಮುಖಾಂತರ ಚರ್ಚೆಯನ್ನು ಪ್ರಾರಂಭ ಮಾಡಿದೆವು. ಆಗಲೂ ಇದೇ ಅಬ್ಜೆಕ್ಷನ್. ಕೊನೆಗೆ ನಾವು ಧರಣಿ ಮಾಡಿದೆವು. ಅಂದರೆ ನಾನು ಇಲ್ಲಿ ಹೇಳುವಂತಾದ್ದು ಏನು ಇದೆ, ಸಾರ್ವಜನಿಕ ಮಹತ್ವದ ವಿಷಯಗಳು ಇರುತ್ತದೆ, ಎಲ್ಲಿ ಭ್ರಷ್ಟಾಚಾರದ ಹಗರಣಗಳು ಇರುತ್ತವೆ ಅದರ ಬಗ್ಗೆ ನಾವು ಯಾವುದೇ ರೂಪದಲ್ಲಿಯಾದರೂ ಚರ್ಚೆ ಮಾಡೋಣ. ಆ ಚರ್ಚೆಗೆ ಅವಕಾಶ ಸಿಗುವಂತಹ ವ್ಯವಸ್ಥೆಯಾಗಬೇಕೇ ಹೊರತು ಅದಕ್ಕೆ ಅಡೆತಡೆಯಾಗುವಂತಾದ್ದು ಆಗಬಾರದು. ಹಿಂದಿನ ಸದನದಲ್ಲಿ ಈ ನಕಲಿ ಛಾಪಾ ಕಾಗದದ ಹಗರಣದ ಬಗ್ಗೆ ನಿಲುವಳಿ ಸೂಚನೆಯ ಮೂಲಕ ನಾವು ಚರ್ಚೆ ಮಾಡುತ್ತೇವೆಂದು ಹೇಳಿದ ಸಂದರ್ಭದಲ್ಲಿ ಅದು ಸಬ್-ಜ್ಯುಡೀಸ್ ಆಗುತ್ತದೆ ಇನ್ನೊಂದು ಆಗುತ್ತದೆಂದು ಅದಕ್ಕೆ ಅಲೋ ಮಾಡಲಿಲ್ಲ. ಮುಂದೆ ನಾವು ಧರಣಿ ಸತ್ಯಾಗ್ರಹ ಮಾಡಿದೆವು. ವಿಧಾನ ಪರಿಷತ್ತಿನಲ್ಲಿ ಚರ್ಚೆ ಪ್ರಾರಂಭ ಮಾಡಲು ಅವಕಾಶ ಆಯಿತು. ಇಲ್ಲಿ ಈ ಸದನದಲ್ಲಿ ಮಾನ್ಯ ಚಂದ್ರೇಗೌಡರು ಯಾವುದೋ ಒಂದು ರೂಪದಲ್ಲಿ ಚರ್ಚೆ ನಡೆಯಲಿ ಸಾರ್ವಜನಿಕ ವಿಷಯಗಳ ಸಂಬಂಧದಲ್ಲಿ ಎಂಬ ಅಭಿಪ್ರಾಯ ಹೊಂದಿಲ್ಲ. ಅದರ ಬದಲು ಒಂದು ಅಡೆತಡೆ ಉಂಟು ಮಾಡುವುದು. ಇಂತಹ ವಿಷಯಗಳು ಬಂದಾಗ ಅಡೆತಡೆ ಉಂಟು ಮಾಡುವುದು. ಆ ನಕಲಿ ಸ್ಟಾಂಪ್ ಪೇಪರ್ ವಿಷಯದಲ್ಲಿಯೂ ಹಾಗೆ ಆಯಿತು. ಮುಂದೆ ಧರಣಿ ಸತ್ಯಾಗ್ರಹ ಮಾಡಿ ಒಂದು ದಿನ ಸದನದ ಕಾಲ ಹರಣವಾದ ಮೇಲೆ ಮತ್ತೆ ಎರಡನೇ ದಿವಸ ಸರ್ಕಾರ ಚರ್ಚೆಗೆ ಒಪ್ಪಿತು. ಆಗ ಚರ್ಚೆ ಪ್ರಾರಂಭ ಮಾಡಿದೆವು. ಅಂದರೆ ಆ ರೀತಿ ಆಗಬೇಕೋ ಏನೋ ಅದು ನನಗೆ ಅರ್ಥವಾಗುತ್ತಿಲ್ಲ. ಆ ರೀತಿ ಧರಣಿ ಸತ್ಯಾಗ್ರಹ ಮಾಡಿ ಆಮೇಲೆ ಒಂದು ದಿವಸ ಸದನ ನಿಂತು ಹೋಗಿ ಟೈಮ್ ವೇಸ್ಟ್ ಆಗಿ ಆಮೇಲೆ ಅಡ್ಡಿ ಇಲ್ಲ. ಚರ್ಚೆ ಪ್ರಾರಂಭ ಮಾಡುವುದು. ಅದು ಆಗಬೇಕೋ ಏನೋ ನನಗೆ ಗೊತ್ತಾಗುತ್ತಿಲ್ಲ. ಈಗ ವಿಧಾನ ಪರಿಷತ್ತಿನಲ್ಲಿ ಇಡೀ ವಿಷಯದ ಬಗ್ಗೆ ಚರ್ಚೆ ಪ್ರಾರಂಭವಾಗುತ್ತಿದೆ.

1.30 ಪಿ.ಎಂ.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಹೇಗೆ ತಮ್ಮ ಕರ್ತವ್ಯವನ್ನು ನಿಭಾಯಿಸುತ್ತಿದ್ದೀರೋ, ಹಾಗೆಯೇ ನಾನೂ ಸಹ ನನ್ನ ಕರ್ತವ್ಯವನ್ನು ನಿಭಾಯಿಸುತ್ತಿದ್ದೇನೆ. ಸಂಸದೀಯ ವ್ಯವಹಾರದ ಮಂತ್ರಿಯಾಗಿ ನನ್ನ ಜವಾಬ್ದಾರಿ ಏನೆಂದರೆ, ಇಲ್ಲಿರತಕ್ಕಂಥ ಕೆಲವು ಸಂವಿಧಾನಾತ್ಮಕವಾದಂತಹ ದೋಷಗಳು ಇರಬಹುದು, ಅಥವಾ ಆಡಳಿತಾತ್ಮಕವಾದಂತಹ ದೋಷಗಳು ಇರಬಹುದು, ನಾವು ಬರೆದುಕೊಂಡಿರತಕ್ಕಂಥ ನಿಯಮಗಳ ವ್ಯಾಪ್ತಿ ಮೀರಿ ಚರ್ಚೆ ಮಾಡಬಹುದೇ ಇಲ್ಲವೇ ಎಂಬುದನ್ನು ನಾನು ನೋಡಬೇಕಾಗುತ್ತದೆ. ಸತ್ಯಸಂಪ್ರದಾಯಗಳನ್ನು ನಾವು ಏನು ಹಾಕಿಕೊಂಡಿದ್ದೇವೋ ಅವುಗಳನ್ನು ಅನುಸರಿಸಬಹುದು. ವಿಷಯ ಚರ್ಚೆ ಮಾಡುವುದಕ್ಕೆ ನನ್ನಿಂದ ಯಾವುದೇ ಅಡ್ಡಿಯಿಲ್ಲ. ದಯಮಾಡಿ ಹಾಗೆ ಹೋಗುವುದು ಬೇಡ. ಅಡ್ಜರ್ನ್‌ಮೆಂಟ್ ಮೋಷನ್

ಅಡಿ ಇದನ್ನು ಚರ್ಚೆ ಮಾಡುವುದು ಬೇಡ ಎಂದು ಮಾತ್ರ ನಾನು ಹೇಳುತ್ತಿದ್ದೇನೆ. this is all my concern. It does not fit into this motion. ಇದನ್ನು ತಾವು ತಪ್ಪಾಗಿ ಏಕೆ ಅರ್ಥೈಸಿಕೊಂಡಿದ್ದೀರೋ ನನಗೆ ಗೊತ್ತಿಲ್ಲ. We will leave it to the discretion of the chair.

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎಂಬ ಬಗ್ಗೆಯೇ ಇಲ್ಲಿ ಚರ್ಚೆಯಾಗುತ್ತಿದ್ದರೆ, ವಿಧಾನ ಪರಿಷತ್ತಿನಲ್ಲಿ ಇದರ ಬಗ್ಗೆ ಈಗಾಗಲೇ ಚರ್ಚೆ ಮುಗಿಯುತ್ತಿದೆ.

ಅಧ್ಯಕ್ಷರು:- ಬೇರೆ ರೂಪದಲ್ಲಿ ಅಲೋ ಮಾಡುತ್ತೇನೆ ಎಂದು ನಾನು ಹೇಳುತ್ತಿದ್ದೇನಲ್ಲಾ. ಆದರೆ ತಾವು ಇದಡಿಯಲ್ಲಿಯೇ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:- ತಕ್ಷಣಕ್ಕೆ ತೀರ್ಮಾನ ಮಾಡಿ, ಅದರಡಿ ಚರ್ಚೆಯನ್ನು ಚಾಲೂ ಮಾಡಿ ಎಂದು ಹೇಳಬಹುದಾಗಿತ್ತಲ್ಲವೇ? ಒಟ್ಟಿನಲ್ಲಿ ಚರ್ಚೆ ಆಗಬೇಕೆಂಬುದೇ ನಮಗೆ ಪ್ರಾಮುಖ್ಯತೆಯ ವಿಚಾರ. ಒಂದು ದಿವಸದಲ್ಲಿ ಈ ಚರ್ಚೆ ಮುಗಿಯುವುದಿಲ್ಲ. ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾವು ಇದರ ಬಗ್ಗೆ ಡೀಟೈಲಾಗಿ ಚರ್ಚೆ ಮಾಡಬೇಕಾಗುತ್ತದೆ.

ಅಧ್ಯಕ್ಷರು:- ತಾವು ಮಾತನಾಡಿದ್ದು ಆಯಿತೇ?

ಶ್ರೀ ಜಗದೀಶ್ ಶೆಟ್ಟರ್:- ಮಾತನಾಡುವ ವಿಷಯ ಇನ್ನೂ ಬಹಳ ಇದೆ.

ಅಧ್ಯಕ್ಷರು:- ಪ್ರಿಲಿಮಿನರಿ ಸಬ್‌ಮಿಷನ್‌ಗೇ ಇಷ್ಟೊಂದು ವಿಷಯಗಳನ್ನು ಪ್ರಸ್ತಾಪಿಸಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್:- ಇಲ್ಲಿ ಪ್ರಮುಖವಾಗಿ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ....

Mr. Speaker:- I have not converted. ಪ್ರಿಲಿಮಿನರಿ ಸಬ್‌ಮಿಷನ್ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ನಾನು 69ರ ಮೂಲಕ ಚರ್ಚಿಸಲು ಶ್ರೀ ವೈ.ಕೆ. ರಾಮಯ್ಯನವರು ಹಾಗೂ ಬೇರೆಯವರು ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ. I will fix up some other day ಎಂದು ಹೇಳುತ್ತಿದ್ದೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರಕ್ಕೆ ನಾನು ಮನದಟ್ಟು ಮಾಡಿಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. That is all.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, Some other day ಅಂದರೆ ಅಲ್ಲೇ ಸಮಸ್ಯೆ ಬರುತ್ತದೆ. ಚರ್ಚೆ ಮಾಡುವುದಕ್ಕೆ ಕಂಟಿನ್ಯೂಯಿಟಿ ಇದ್ದರೆ ಅಡ್ಡಿ ಇಲ್ಲ. ತಮಗೆ ಡಿಸ್ಕ್ರಿಷನ್ ಪವರ್ ಕೊಡುತ್ತಿದ್ದೇವೆ. ನಮಗೆ ಚರ್ಚೆ ಮಾಡಲಿಕೆ ಅವಕಾಶ ಕೊಡಬೇಕು.

ಅಧ್ಯಕ್ಷರು:- ತಾವು ಏನನ್ನು ಹೇಳಬೇಕೋ ಅದನ್ನು ಹೇಳಿಬಿಡಿ. ಅನಂತರ ನಾನು ನನ್ನ ಡಿಸಿಷನ್ ಏನು ಎನ್ನುವುದನ್ನು ಹೇಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ:- ಹಾಗಾದರೆ ಮಾನ್ಯ ಅಧ್ಯಕ್ಷರು ಯಾವುದೋ ಒಂದು ರೀತಿಯ ತೀರ್ಮಾನಕ್ಕೆ ಬಂದಂತೆ ಇದೆ. ಹಾಗೆ ಮಾಡಬೇಡಿ.

ಅಧ್ಯಕ್ಷರು:- ಹಾಗೇನಿಲ್ಲ, ನಾನು ಅಲೋ ಮಾಡುವುದಿಲ್ಲ ಎಂದು ಹೇಳಿದರೆ ನೀವು ಅದನ್ನು ಅಬ್ಜೆಕ್ಷನ್ ಮಾಡಬಹುದು. ನಾನು some other form ನಲ್ಲಿ ಅಲೋ ಮಾಡುತ್ತೇನೆ ಎಂದು ಹೇಳಿದರೂ ಕೂಡ, ನೀವು ಇದರ ಬಗ್ಗೆಯೇ ಮಾತನಾಡುತ್ತಿದ್ದೀರಲ್ಲಾ?

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ತಾವು ಒಂದು ಕೆಲಸ ಮಾಡಿ. 5-10 ನಿಮಿಷಗಳ ಕಾಲ ಸದನ ಅಡ್ಜರ್ನ್ ಮಾಡಿ. ಇದನ್ನು ಯಾವ ಫಾರ್ಮ್‌ನಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಡಿಸ್ಕಸ್ ಮಾಡಿ, ಇವತ್ತೇ ಈಗಲೇ ತೀರ್ಮಾನ ಕೊಟ್ಟುಬಿಡಿ. ಆಗ ಕೂಡಲೇ ನಾವು ಚರ್ಚೆಯನ್ನು ಆರಂಭಿಸಬಹುದು.

ಅಧ್ಯಕ್ಷರು:- ಸ್ವಾಮಿ, ಇವತ್ತು ಶುಕ್ರವಾರವಾದ್ದರಿಂದ ಯಾರೂ ಸದಸ್ಯರುಗಳು ಇರುವುದಿಲ್ಲ. ಸುಮ್ಮನೆ ಮಾತಿಗೆ ಹೇಳಿದೆ. ಇದೆಲ್ಲವನ್ನೂ ಕೂಡ ನಾವು ನೋಡಬೇಕಲ್ಲವೇ? ಈಗಾಗಲೇ ಕೆಲವರು ನಮಗೆ ಹಸಿವಾಗುತ್ತದೆ ಎಂದು ನನಗೆ ಚೀಟಿಗಳನ್ನು ಕಳುಹಿಸುತ್ತಿದ್ದಾರೆ. ಈ ಸಮಯದಲ್ಲಿ ನಾವು ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಡಿ.ವಿ.ಸದಾನಂದಗೌಡ:- ಯಾವುದಾದರೊಂದು ನಿಶ್ಚಯಕ್ಕೆ ಬನ್ನಿ. ಯಾವ ಫಾರ್ಮ್‌ನಲ್ಲಿ ತೆಗೆದುಕೊಳ್ಳುವುದು? ಯಾವಾಗ ತೆಗೆದುಕೊಳ್ಳುವುದು ಎಂಬ ಬಗ್ಗೆ ತೀರ್ಮಾನ ಮಾಡಿ.

ಅಧ್ಯಕ್ಷರು:- ನಾನು ಇನ್ನೂ ಮಾನ್ಯ ಸಿಂಧ್ಯಾರವರಿಗೆ ಸಮಯ ಕೊಟ್ಟಿಲ್ಲ, ತಮ್ಮ ನಾಯಕರೇ ಇನ್ನೂ ಮಾತನಾಡುತ್ತಿದ್ದಾರೆ. ಅವರೂ ಒಂದೆರಡು ನಿಮಿಷ ಮಾತನಾಡಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾಗಿ ಇಲ್ಲಿ ಲೋಕಾಯುಕ್ತರನ್ನು ಕಾಂಪ್ಲಿಮೆಂಟ್ ಮಾಡತಕ್ಕದ್ದು ಒಂದು ಭಾಗ. ಲೋಕಾಯುಕ್ತರು ಏನು ರೈಡ್ಸ್ ಮಾಡಿದ್ದಾರೆ, ಅವರಿಗೆ ಬಂದಿರತಕ್ಕಂಥ ಇನ್‌ಫರ್‌ಮೇಷನ್ ಮೇಲೆ ಯಾರು ರೆಸ್ಪಾನ್ಸಿಬಲ್ ಇದ್ದಾರೆ ಎಂಬುದು ಒಂದು ಭಾಗ. ನಾವು ಈ ಅಡ್ಜರ್ನ್‌ಮೆಂಟ್ ಮೋಷನ್ ಫಾರ್ಮ್‌ನಲ್ಲಿ ಏಕೆ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ಸಬ್‌ಮಿಟ್ ಮಾಡುತ್ತಿದ್ದೇನೆ. ಅಂದರೆ,

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸಿಂಧ್ಯಾರವರೇ, ...

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಶೆಟ್ಟರ್‌ರವರು ಮಾತನಾಡಿದ್ದು ಮುಗಿಯಿತು ಎಂದು ನಾನು ಭಾವಿಸಿದ್ದೆ. I am very sorry Sir.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ತಾವು ನಿರ್ಣಯ ಕೊಡದಿದ್ದರೆ, ನಾವು ಈ ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಮಾತನಾಡುವುದನ್ನೇ ಕಂಟಿನ್ಯೂ ಮಾಡುತ್ತೇವೆ.

Mr. Speaker:- I have not allowed under adjournment motion.

ಶ್ರೀ ಜಗದೀಶ್ ಶೆಟ್ಟರ್:- ನೋ, ಸರ್. ಅದರ ಬಗ್ಗೆ ಪ್ರಿಲಿಮಿನರಿ ಸಬ್ ಮಿಷನ್ ಅನ್ನೇ ನಾವು ಕಂಟಿನ್ಯೂ ಮಾಡುತ್ತಿದ್ದೇವೆ. ಈ ಒಂದು ಭ್ರಷ್ಟಾಚಾರದ ಹಗರಣದಲ್ಲಿ ಸರ್ಕಾರದ ಅನೇಕ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ. ಮಾನ್ಯ ಲೋಕಾಯುಕ್ತರು ನಗರಸಭೆಗಳ ಮೇಲೆ ಧಾಳಿ ಮಾಡಿ 200 ಕೋಟಿ ರೂಪಾಯಿಗಳಷ್ಟು ಭಾರೀ ಭ್ರಷ್ಟಾಚಾರದ ಹಗರಣಗಳನ್ನು ಹೊರಗೆಳೆದಿದ್ದಾರೆ. ಲೋಕಾಯುಕ್ತರು ದಾಸರಹಳ್ಳಿ ನಗರಸಭೆಗೆ ಧಾಳಿ ನಡೆಸಿದಂತಹ ಸಂದರ್ಭದಲ್ಲಿ, ಅಲ್ಲಿನ ಆಯುಕ್ತರು ನಾಪತ್ತೆಯಾಗಿದ್ದರು. ಇದಲ್ಲದೆ, ಅಲ್ಲಿನ ಎಷ್ಟೋ ದಾಖಲೆಗಳನ್ನು ನಗರಸಭೆಯ ಹೊರಗಡೆ ಸುಟ್ಟು ಹಾಕಿದ್ದಾರೆ. ಅಲ್ಲಿನ ಆಯುಕ್ತರು ಮತ್ತು ಸರ್ಕಾರದ ಅಧಿಕಾರಿಗಳು ಇವತ್ತು ದಾಖಲೆಗಳನ್ನು ನಾಶ ಮಾಡುವ ಮಟ್ಟಕ್ಕೆ ಹೋಗಿದ್ದಾರೆಂದರೆ, ಇದರ ಹಿನ್ನೆಲೆಯಲ್ಲಿ ಯಾರಿದ್ದಾರೆ? 200 ಕೋಟಿ ರೂಪಾಯಿಗಳಷ್ಟು ಭ್ರಷ್ಟಾಚಾರ ಹಗರಣ ಹೊರಗೆ ಬಂದಮೇಲೆ, ಅದಕ್ಕೆ ಸಂಬಂಧಪಟ್ಟಂತಹ ಆಯುಕ್ತರು ಮತ್ತು ಅಧಿಕಾರಿಗಳ ಮೇಲೆ ಸರ್ಕಾರ ಇದುವರೆವಿಗೂ ಯಾವುದೇ ರೀತಿಯ ಕಾನೂನಿನ ಕ್ರಮವನ್ನೂ ಕೈಗೊಂಡಿಲ್ಲ. ಅಟ್‌ಲೀಸ್ಟ್ ಅವರನ್ನು ಸಸ್ಪೆಂಡ್ ಕೂಡ ಮಾಡಿಲ್ಲ. ಹಾಗಾದರೆ ಸರ್ಕಾರದ ನೀತಿಯೇನು? ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಒಂದು ಕಡೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಏನು ಚಿಂತನೆ ನಡೆದಿದೆ? ಹಗರಣಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಇದುವರೆವಿಗೂ ಏಕೆ ಸಸ್ಪೆಂಡ್ ಮಾಡಿಲ್ಲ? ಅವರನ್ನು ಏಕೆ ಸರ್ಕಾರ ರಕ್ಷಣೆ ಮಾಡುತ್ತಿದೆ? ಇದರ ಹಿನ್ನೆಲೆಯಲ್ಲಿ ಯಾರಿದ್ದಾರೆ ಎನ್ನುವುದನ್ನು ಇವತ್ತು ನಾವು ವಿಚಾರ ಮಾಡಬೇಕಾಗುತ್ತದೆ. ಸರ್ಕಾರ ಲೋಕಾಯುಕ್ತರಿಗೆ ಏನಾದರೂ ಗೌರವ ಕೊಡುವುದಿದ್ದರೆ, ಲೋಕಾಯುಕ್ತರು ಬಯಲಿಗೆಳೆದಿರುವ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಕ್ರಮ ಜರಗಿಸಬೇಕು. ಇನ್ನೂ ಏಕೆ ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ ಎಂದು ನಾನು ಸರ್ಕಾರವನ್ನು ಕೇಳಬಯಸುತ್ತೇನೆ. ಲೋಕಾಯುಕ್ತರಿಗೆ ಸಪರೇಟಾಗಿ ದೂರು ಹೋಗಿದೆ. 10-15 ಜನ ಹಗರಣದಲ್ಲಿ ಭಾಗಿಯಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾಗರೀಕರ ಪರವಾಗಿ ಶ್ರೀ ಸಚ್ಚಿದಾನಂದ ಮೂರ್ತಿ ಎಂಬುವವರು. ಕಳೆದ ವರ್ಷ ನಗರಸಭೆಯಲ್ಲಿ ನಡೆದಿರುವ ಅಕ್ರಮ ಅವ್ಯವಹಾರದ ಬಗ್ಗೆ ಒಂದು ಕಂಪ್ಲೇಂಟ್ ಕೊಟ್ಟಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಕಛೇರಿಯಿಂದ ಮುಖ್ಯಮಂತ್ರಿಯವರ ಉಪ ಕಾರ್ಯದರ್ಶಿಯವರು, ಆ ಬಗ್ಗೆ ಅವರಿಗೆ ದಿನಾಂಕ 1-3-2001ರಂದು ಉತ್ತರ ಬರೆದರು. ತಮ್ಮ ಪತ್ರದಲ್ಲಿ ಅವರು, "ಉಲ್ಲೇಖಿದ ವಿಷಯದ ಬಗ್ಗೆ ತಾವು ಮಾನ್ಯ ಮುಖ್ಯಮಂತ್ರಿಯವರಿಗೆ ಕಳುಹಿಸಿದ ಮನವಿಯನ್ನು" ಸೂಕ್ತ ಕ್ರಮಕ್ಕಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಈ ಸಂಖ್ಯೆಯ ಪತ್ರದ ಅನ್ವಯ ಕಳುಹಿಸಿಕೊಡಲಾಗಿದೆ. ಇನ್ನು ಮುಂದೆ ಅವರನ್ನು ಸಂಪರ್ಕಿಸಲು ಕೋರಲಾಗಿದೆ. ಎಂದು ತಿಳಿಸಿದರು. ಈ ಒಂದು ಕಂಪ್ಲೇಂಟ್‌ನಲ್ಲಿ ಸಚ್ಚಿದಾನಂದಮೂರ್ತಿಯವರು 35 ಜನರ ಹೆಸರನ್ನು ಅದರಲ್ಲಿ ಮೆನ್‌ಷನ್ ಮಾಡಿದ್ದಾರೆ. ಆ 35 ಜನರಲ್ಲಿ ಹಿರಿಯ ಅಧಿಕಾರಿಗಳು, ಆಯುಕ್ತರು, ಐ.ಎ.ಎಸ್. ಅಧಿಕಾರಿಗಳು ಮತ್ತು ಒಬ್ಬ ಸಚಿವರ ಹೆಸರುಗಳು ಇವೆ. ಆದರೆ ಅದರ ಬಗ್ಗೆ ಏನೂ ಎನ್ ಕ್ವೈರಿ ಆಗಲಿಲ್ಲ. ಆದರೆ ಮುಂದೆ, ದಿನಾಂಕ 31-3-2001ಕ್ಕೆ ಮುಖ್ಯಮಂತ್ರಿಯವರ ಕಛೇರಿಯಿಂದ ಸಚ್ಚಿದಾನಂದ ಮೂರ್ತಿಯವರಿಗೆ ಮತ್ತೊಂದು ಪತ್ರ ಬಂದಿತು. ಅದು ಹೀಗಿದೆ. ಕೃಷ್ಣಾರಾಜನಗರ ನಗರಸಭೆಯ ಆಯುಕ್ತರ ಬಗ್ಗೆ. "ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ,

ದಿನಾಂಕ 9-3-2001ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ಕಳುಹಿಸಿರುವ ಮನವಿ ಪತ್ರವು ತಲುಪಿದೆ. ತಮ್ಮ ಕೋರಿಕೆಯನ್ನು ಪರಿಶೀಲಿಸಿ, ಮುಂದಿನ ಸೂಕ್ತ ಕ್ರಮವನ್ನು ಕೈಗೊಳ್ಳಲು ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರನ್ನು ಕೋರಲಾಗಿದೆ. ಹಾಗೂ ಕೈಗೊಂಡ ಕ್ರಮವನ್ನು ತಮಗೆ ನೇರವಾಗಿ ತಿಳಿಸಲು ಸದರಿ ಅಧಿಕಾರಿಯವರನ್ನು ಕೋರಲಾಗಿದೆ." ಇದರ ಬಗ್ಗೆ ಎನ್‌ಕ್ವೈರಿ ಸಲುವಾಗಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಅವರು ದಿನಾಂಕ 31-3-2001ರ ಪತ್ರದಲ್ಲಿ ಹೇಳಿದ್ದರು. ಅದರ ನಂತರ ಏನಾಯಿತು? ಅಲ್ಲಿಂದ ಇಲ್ಲಿಯವರೆಗೆ ಅವರು ಎನ್‌ಕ್ವೈರಿ ಮಾಡಿದರೋ ಇಲ್ಲವೋ? ಏಕೆ ಮಾಡಲಿಲ್ಲ? ಮಾಡಿದ್ದರೆ ಅದರ ವರದಿ ಏನಿದೆ ಎಂಬುದು ಏನೂ ಬರಲಿಲ್ಲ. ಇದು ಡಿಸ್ಕ್ಲೋಸ್ ಆಗಲಿಲ್ಲ. ಮುಂದೆ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯವರ ದಿನಾಂಕ 19-3-2001ಕ್ಕೆ ಪತ್ರವೊಂದನ್ನು ಬರೆದು,"ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಮನವಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಸದರಿ ಮನವಿಯಲ್ಲಿರುವ ಆಪಾದನೆಗಳನ್ನು ತಾವು ಖುದ್ದಾಗಿ ಕೂಲಂಕಷರಾಗಿ ತನಿಖೆ ಮಾಡಿ, ಈ ಬಗ್ಗೆ ಒಂದು ವಿವರವಾದ ವರದಿಯನ್ನು ಒಂದು ವಾರದೊಳಗಾಗಿ ಸರ್ಕಾರಕ್ಕೆ ಕಳುಹಿಸುವಂತೆ ಕೋರಲು ನಾನು ನಿರ್ದೇಶಿತನಾಗಿದ್ದೇನೆ ಎಂದು ತಿಳಿಸುತ್ತಾರೆ. " ಈ ಪ್ರಸಂಗಗಳು ಕಳೆದ ಒಂದೆರಡು ವರ್ಷಗಳಿಂದ ನಡೆಯುತ್ತಿದೆ. ಅದರ ಬಗ್ಗೆ ಸಾಕಷ್ಟು ಆಪಾದನೆಗಳು ಮಾನ್ಯ ಮುಖ್ಯಮಂತ್ರಿಗಳ ಕಚೇರಿಗೂ ಕೂಡ ಹೋಗಿ ತಲುಪಿದ್ದವು. ಆದರೆ ಅದರ ಬಗ್ಗೆ ಇವತ್ತು ಎನ್‌ಕ್ವೈರಿ ಆಗಲಿಲ್ಲ. ಎನ್ ಕ್ವೈರಿಯಾಗಿ ಯಾವುದೇ ವಿಷಯಗಳೂ ಸಹ ಹೊರಗೆ ಬರಲಿಲ್ಲ. ಹಾಗಾದರೆ ಇದರ ಹಿನ್ನೆಲೆ ಏನು? ಇವತ್ತು ಆ ಫಿರ್ಯಾದಿಯಲ್ಲಿ ಆಪಾದಿತರಾಗಿರುವ ಅಧಿಕಾರಿಗಳು ಮತ್ತು ಮಂತ್ರಿಯವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವಂತಹ ವಿಷಯ ಇಲ್ಲಿ ಚರ್ಚೆಯಾಗಬೇಕಾಗಿದೆ. ಸರ್ಕಾರ ಇಲ್ಲಿ ಅಧಿಕಾರಿಗಳು ಮತ್ತು ಮಂತ್ರಿಗಳನ್ನು ರಕ್ಷಣೆ ಮಾಡಲಿಕ್ಕೆ ಹೊರಟಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಗರಸಭೆಯಲ್ಲಿರುವ ಭ್ರಷ್ಟಾಚಾರದ ಬಗ್ಗೆ ಕೆಲವು ಪ್ರಮುಖ ವ್ಯಕ್ತಿಗಳು ಲೋಕಾಯುಕ್ತರಿಗೆ ದೂರನ್ನು ದಾಖಲು ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. 240 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆ ಆಗಿದ್ದು ಈ ಹಗರಣಕ್ಕೆ ಕಾರಣ. ಅದರಲ್ಲಿ ಏಳು ಜನರನ್ನು ಆರೋಪಿಗಳನ್ನಾಗಿ ಮಾಡಿದ್ದಾರೆ. ಕಪ್ಲೇಂಟ್ ಕೊಟ್ಟವರು ದೊಡ್ಡಮನಿ ದಶರಥ್ ಮತ್ತು ಇನ್ನಿತರರು. ಇವರು ಮಂತ್ರಿಗಳು ಮತ್ತು ಇನ್ನು ಹತ್ತಾರು ಜನರ ಹೆಸರು ಸೇರಿಸಿ ಲೋಕಾಯುಕ್ತದವರಿಗೆ ಸೆಪರೇಟಾಗಿ ಕಂಪ್ಲೇಂಟ್ ಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ. ಹಾಗಾದರೆ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಈ ರೀತಿ ಹಗರಣ ನಡೆದು 200 ಕೋಟಿ ರೂಪಾಯಿಗಳಷ್ಟು ಭ್ರಷ್ಟಾಚಾರ ಹಗರಣ ನಡೆದು ಇಡೀ ರಾಜ್ಯದಲ್ಲಿ ಅಲ್ಲೋಲಕಲ್ಲೋಲ ಏರ್ಪಟ್ಟಿರುವ ಸಂದರ್ಭದಲ್ಲಿ ಇದರಲ್ಲಿ ಇನ್‌ವಾಲ್ವ್‌ಮೆಂಟ್ ಆಗಿರುವವರು ಯಾರು ಎಂಬುದನ್ನು ಸರ್ಕಾರ ದಯವಿಟ್ಟು ಹೊರಗೆ ಹಾಕಬೇಕಾಗುತ್ತದೆ. ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಎಂಬುದನ್ನು ಹೇಳಬೇಕಾಗುತ್ತದೆ. ಲೋಕಾಯುಕ್ತದವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ಎಲ್ಲರೂ ಹೇಳಿದರು. ಒಳ್ಳೆಯ ಕೆಲಸ ಮಾಡಿದ ಲೋಕಾಯುಕ್ತದವರಿಗೆ ಇನ್ನು ಹೆಚ್ಚಿನ ಅಧಿಕಾರ ಏಕೆ ಕೊಟ್ಟಿಲ್ಲ? ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಇನ್ನು ಹೆಚ್ಚಿನ ಅಧಿಕಾರ ಏನು ಕೊಟ್ಟಿದ್ದೀರಿ?

ಲೋಕಾಯುಕ್ತದವರಿಗೆ ಇದರಲ್ಲಿ ಒಬ್ಬ ಮಂತ್ರಿಗಳು ಇನ್‌ವಾಲ್ವ್‌ಮೆಂಟ್ ಆಗಿದ್ದಾರೆಂದು ಒಂದು ಕಂಪ್ಲೇಂಟ್ ಹೋಗಿದೆ. ಮಂತ್ರಿಗಳ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಲೋಕಾಯುಕ್ತಕ್ಕೆ ಏನು ಅಧಿಕಾರ ಇದೆ ಎಂಬುದು ಗೊತ್ತಾಗಬೇಕಾಗಿದೆ. ಆ ಮಂತ್ರಿಗಳ ಹೆಸರು ಈ ಪ್ರಕರಣದಲ್ಲಿ ಬಂದಮೇಲೆ ವಿಚಾರಣೆ ಸರಿಯಾದ ರೀತಿಯಲ್ಲಿ ನಿಷ್ಪಕ್ಷಪಾತದಿಂದ ನಡೆಯುವುದಕ್ಕೆ ಸಾಧ್ಯ ಇದೆಯೇ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ನಗರಸಭೆಗಳ ಮೇಲೆ ಕಂಟ್ರೋಲ್ ಇರುವಂಥದ್ದು ಸರ್ಕಾರ, ಕಾಗದ ಪತ್ರಗಳ ಮೇಲೆ ಕಂಟ್ರೋಲ್ ಇರುವಂಥದ್ದು ಸರ್ಕಾರ. ಮಂತ್ರಿಗಳು ತಮ್ಮ ಅಧಿಕಾರದಲ್ಲಿ ಮುಂದುವರೆದು ತನಿಖೆ ನಡೆಸಿದರೆ ಸರಿಯಾದ ತನಿಖೆ ನಡೆಯುವುದಿಲ್ಲವೆಂಬ ಸಂಶಯ ಬರುತ್ತದೆ. ಇದರ ಬಗ್ಗೆ ಕೂಲಂಕಷವಾಗಿ ಚರ್ಚೆ ಆಗಿ ಇನ್ನು ಸಾಕಷ್ಟು ವಿಷಯಗಳ ಬಗ್ಗೆ ಚರ್ಚೆ ಆಗಬೇಕಾಗಿದೆ. ಅದರ ಬಗ್ಗೆ ಇನ್ನೂ ಹೆಚ್ಚಿನ ವಿಷಯಗಳನ್ನು ತಮ್ಮ ಮುಂದೆ ಹಾಗೂ ಸದನದ ಮುಂದೆ ಪ್ರಸ್ತಾಪ ಮಾಡುವವರಿದ್ದೇವೆ. ಇದರಲ್ಲಿ ಕೇವಲ ಸ್ವಾಯತ್ತ ಸಂಸ್ಥೆ ಏನಿದೆ ನಗರಸಭೆಗಳು, ನಗರಸಭೆಗಳ ಸದಸ್ಯ ಅಲ್ಲ, ಅಲ್ಲಿ ಇದ್ದಂತಹ ಅಧ್ಯಕ್ಷರು ಅಷ್ಟೇ ಅಲ್ಲ, ಮಂತ್ರಿಗಳ ಕೈವಾಡ ಇದರಲ್ಲಿ ಇದೆ ಎನ್ನುವುದು ಯಾವ ರೀತಿ ಹಗರಣ ಮಾಡಿದ್ದಾರೆಂಬುದನ್ನು ಹೇಳಬೇಕಾಗುತ್ತದೆ. ಒಂದು ಟ್ಯೂಬ್‌ಲೈಟ್ ಖರೀದಿ ಮಾಡುವಾಗ ಮೂರುವರೆ ಲಕ್ಷ ರೂಪಾಯಿಗೆ ಸಿಗುವುದನ್ನು 9 ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿಗಳು ಇದರಲ್ಲಿ ದುರುಪಯೋಗವಾಗಿದೆ. ನಮಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ನಾವು ಎಲ್ಲಿ ಚರ್ಚೆ ಮಾಡಬೇಕು ಎಂಬುದನ್ನು ಹೇಳಿ. ಕಳೆದ ಮೂರು ವರ್ಷಗಳಿಂದ ನಗರಪಾಲಿಕೆ ಆಯುಕ್ತರು ಯಾರಿದ್ದಾರೆ, ಅನುದಾನ ಎಲ್ಲಿಂದ ಬಂದಿತು, ಅನುದಾನ ವಿತರಣೆಯ ಸ್ಟಾಂಪ್ ಹಣ ಎಷ್ಟು ಬಂದಿತು? ಇದರಲ್ಲಿ ಸಿಎಜಿ ರಿಪೋರ್ಟ್ ಬಂದಿದೆ, 140 ಕೋಟಿ ರೂಪಾಯಿಗಳಷ್ಟು ಅಡಿಷನಲ್ ಫಂಡ್ ಬಂದಿದ್ದರಿಂದ ಈ ಅವ್ಯವಹಾರ ಚಾಲನೆ ಆಯಿತು. ಅದರಲ್ಲಿ ಏನಿದೆ ಎಂಬುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದ. ಇಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡುತ್ತಿದ್ದೇನೆ. ವಿದ್ಯುತ್ ಕಂಬ ಹಾಕಿಸುವುದರ ಬಗ್ಗೆ ನಾಲ್ಕು ಲಕ್ಷ 90 ಸಾವಿರ ರೂ ಹಾಕಿದ್ದಾರೆ. ಅಂಬಾಸಿಡರ್ ಕಾರ್‌ಗೆ ನಾಲ್ಕು ನಾಲ್ಕೂವರೆ ಲಕ್ಷ ರೂ. ಇರಬಹುದು, ಅದರ ಖರ್ಚು 8.48 ಲಕ್ಷ ರೂಪಾಯಿ ಹಾಕಿದ್ದಾರೆ. ಇಂಥದ್ದಕ್ಕೆ ಸರ್ಕಾರ ತಕ್ಷಣ ಸ್ಪಂದನ ಮಾಡಬೇಕು ಇಂತಹ ಸಾಕಷ್ಟು ಉದಾಹರಣೆಗಳಿವೆ.

ಅಧ್ಯಕ್ಷರು:- ನಿಲುವಳಿ ಸೂಚನೆ ರೂಪದಲ್ಲಿ ಅಲ್ಲ, ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾವು ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ಏಕೆ ತೆಗೆದುಕೊಂಡು ಬರಬೇಕೆಂದು ಹೇಳಿದ್ದೇವೆಂದರೆ, ಈಗಾಗಲೇ ಪತ್ರಿಕೆಗಳಲ್ಲಿ ಲೋಕಾಯುಕ್ತದವರು ಧಾಳಿ ಮಾಡಿರತಕ್ಕಂಥದ್ದು ಬಂದಿದೆ. ಕೃಷ್ಣರಾಜಪುರ ಸಿಎಮ್‌ಸಿ, ಮಹದೇವಪುರ ಬೋಮ್ಮನ ಹಳ್ಳಿ, ಪಟ್ಟಣಗೆರೆ, ದಾಸರಹಳ್ಳಿ, ಬ್ಯಾಟರಾಯನಪುರ ಮತ್ತು ಯಲಹಂಕ ಪುರಸಭೆಗಳಲ್ಲಿ ನಡೆದಿರುವಂತಹ ಅವ್ಯವಹಾರಗಳ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ವಿವರಗಳೂ ಕೂಡ ಪತ್ರಿಕೆಯಲ್ಲಿ ಬಂದಿದೆ. ಲೋಕಾಯುಕ್ತರವರು ಎಲ್ಲೋ ಒಂದು ಕಡೆ ಹೇಳಿದ್ದಾರೆ. 2-3 ತಿಂಗಳುಗಳಲ್ಲಿ ಆದಷ್ಟು ಬೇಗ ಈ ವಿಚಾರಣೆಯನ್ನು ಮುಗಿಸುತ್ತೇವೆಂದು ಹೇಳಿದ್ದಾರೆ. ನಾವು ನಿಲುವಳಿ ಸೂಚನೆ ರೂಪದಲ್ಲಿ

ಮಾತನಾಡತಕ್ಕಂತಹ ಸಂದರ್ಭದಲ್ಲಿ ಸಂವಿಧಾನದ ನಡವಳಿಕೆ ಪ್ರಕಾರ ಅವರ ವಿಚಾರಣೆಗೆ ಸಂಬಂಧಪಟ್ಟ ಹಾಗೆ ಏನೂ ಸಹಿತ ಮಾತನಾಡುವುದಕ್ಕಾಗುವುದಿಲ್ಲ. ಇದು ಸರ್ಕಾರದ ವೈಫಲ್ಯತೆ ಎಲ್ಲಿ ಎಂಬುದನ್ನು ನಾನು ಎತ್ತಿ ಹಿಡಿಯಬೇಕಾಗುತ್ತದೆ. ಏಕೆ ಇದನ್ನು ನಿಲುವಳಿ ಸೂಚನೆ ರೂಪದಲ್ಲಿ ತಂದಿದ್ದೇವೆ, ಈ ವಿಚಾರದಲ್ಲಿ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ವಿಧಾನ ಸಭೆ ಪ್ರಾರಂಭವಾದ ಮಾರನೆ ದಿನ ಒಂದು ಹೇಳಿಕೆಯನ್ನು ಕೊಡಬಹುದಾಗಿತ್ತು. ನುನು ಮುಖ್ಯಮಂತ್ರಿಗಳ ಮೇಲೆ ನೇರವಾಗಿ ಹೇಳುತ್ತಿದ್ದೇನೆ. ಅವರಿಗೆ ನಿಲ್ಲಿಸುವುದಕ್ಕೆ ಇದುವರೆಗೆ ತೆಗೆದುಕೊಂಡಿರತಕ್ಕಂತಹ ಕ್ರಮಗಳು ಏನು? ಈ ಎಲ್ಲಾ ಸಿಎಮ್‌ಸಿ ಟಿಎಮ್‌ಸಿಗಳಿಗೆ ಎಲ್ಲಿಂದ ದುಡ್ಡು ಬಂದಿದೆ, ಅವರೇ ಏನಾದರೂ ಸೋರ್ಸ್ ಮಾಡಿಕೊಂಡಿದ್ದಾರಾ? ನಾವು ಏನು ಚರ್ಚೆ ಮಾಡಬೇಕು ಎಂಬುದಕ್ಕೆ ಸೀಮಿತವಾಗಿ ಮಾತ್ರ ನಾನು ಹೇಳುತ್ತಿದ್ದೇನೆ. ಡೀಟೇಲ್ಸ್ ಬಗ್ಗೆ ಹೋಗುತ್ತಿಲ್ಲ. ನಿಲುವಳಿ ಸೂಚನೆ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು. ನಿಮ್ಮ ಮನಸ್ಸು ಒಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಟಾನಮಸ್ ಬಾಡಿ ಪ್ರಶ್ನೆ ಬರುವುದಿಲ್ಲ ಲೋಕಾಯುಕ್ತ ಬಗ್ಗೆಗೂ ಸಹಿತ ನಾನು ಚರ್ಚೆ ಮಾಡುವುದಿಲ್ಲ. ನಾನು ಚರ್ಚೆ ಮಾಡುವುದು ನೇರವಾಗಿ ಫೈನಾನ್ಸ್ ಮಿನಿಸ್ಟರ್ ಆಗಿ ರಿಸೋರ್ಸಸ್ ಮೊಬಲೈಸ್ ಮಾಡತಕ್ಕಂತಹ ವಿಚಾರದಲ್ಲಿ ಮುಖ್ಯಮಂತ್ರಿಗಳು ಲೂಫ್‌ಹೋಲ್ಸ್ ಪ್ಲಗ್ ಮಾಡತಕ್ಕಂತಹ ವಿಚಾದಲ್ಲಿ ಹೇಗೆ ವಿಫಲರಾಗಿದ್ದಾರೆ which are the departments which are concerned directly with the Chief Minister ಎನ್ನುವುದು ಬಹಳ ಮುಖ್ಯ. ಉದಾಹರಣೆಗೆ ನಾನು ಹೇಳುತ್ತೇನೆ, ಕಮರ್ಷಿಯಲ್ ಟ್ಯಾಕ್ಸ್‌ನಿಂದ 6000 ಕೋಟಿ ರೂಪಾಯಿಗಳು ವರ್ಷಕ್ಕೆ ಆದಾಯ ಬರುತ್ತಿದೆ. ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನಿಂದ 900 ಕೋಟಿ ರೂ. ಬರುತ್ತಿದೆ.

ಶ್ರೀ ಬಿ. ರಮಾನಾಥ್ ರೈ:- ಮುಖ್ಯಮಂತ್ರಿಗಳು ಲೂಪ್‌ಹೋಲ್ಸ್ ತಡೆಯಲಿಲ್ಲ ಎಂದು ಹೇಳುತ್ತಿದ್ದೀರಿ. ಬಹುಶಃ ಅದು ಕೇವಲ ಈ ಅಧಿಕಾಲಾವಧಿಯಲ್ಲಿ ಮಾತ್ರ ತೊಂದರೆ ಆಗಿದೆ ಹೇಗೆ? ಲೋಕಾಯುಕ್ತ ತನಿಖೆ ಮಾಡುವುದು ಹೇಗೆ?

Sri P.G.R. Sindhia:- I have not yielded. The Hon'ble Speaker has allowed me to speak.

ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಕಮರ್ಷಿಯಲ್ ಡಿಪಾರ್ಟ್‌ಮೆಂಟ್‌ನಿಂದ ಆರು ಸಾವಿರ ಕೋಟಿ ರೂಪಾಯಿಗಳ ಆದಾಯ ಬರುತ್ತಿದೆ. ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್‌ನಿಂದ 900 ಕೋಟಿ ರೂಪಾಯಿಗಳ ಆದಾಯ ಬರುತ್ತದೆ. ಎಕ್ಸೈಸ್ ಡಿಪಾರ್ಟ್ ಮೆಂಟ್‌ನಿಂದ 1600 ಕೋಟಿ ರೂಪಾಯಿಗಳು ಬರುತ್ತದೆ. ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ನಿಂದ ಸುಮಾರು 900 ರಿಂದ ಸಾವಿರ ಕೋಟಿ ರೂಪಾಯಿಗಳು ಬರುತ್ತದೆ. ಸ್ಟಾಂಪ್ ಡ್ಯೂಟಿ ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಏನಿದೆ ಇದು ಎಷ್ಟರಮಟ್ಟಿಗೆ ಕೆಲಸ ಮಾಡಿದೆ? ರಿಸೋರ್ಸಸ್ ಎಂದರೆ, ಮುಖ್ಯಮಂತ್ರಿ ಎಂದರೆ, ಫೈನಾನ್ಸ್ ಮಿನಿಸ್ಟರ್ ಎಂದರೆ, ದುಡ್ಡು ಟ್ರೆಜರಿಯಲ್ಲಿ ಇಟ್ಟುಕೊಂಡಿರುವುದಿಲ್ಲ. ಒಂದು ಕಡೆ ಬರುತ್ತಿರುತ್ತದೆ. ಇನ್ನೊಂದು ಕಡೆ ಖರ್ಚಾಗುತ್ತದೆ. ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. why we want to bring it in the form of the

Adjournment Motion? ಇವತ್ತಾದರೂ ನೀವು ಲೂಪ್‌ಹೋಲ್ಸ್ ಪ್ಲಗ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೀರಿ. ಎಂಬುದು ನಮಗೆ ಗೊತ್ತಾಗಬೇಕು. ಬರಗಾಲ ಬಂದಿದೆ, ನಿನ್ನೆ ಕಂಟ್ರಾಕ್ಟರ್‌ರು 1200 ಕೋಟಿ ರೂಪಾಯಿಗಳ ಬಾಕಿ ಬಿಲ್ ಇದೆ ಎಂದು ಸರ್ಕಾರಕ್ಕೆ ಹೊಗಳಿಬಿಟ್ಟು ಹೋಗಿದ್ದಾರೆ. ದುಡ್ಡನ್ನು ಕೊಡಿಸುವುದಕ್ಕೆ ನಿಮಗೆ ಶಕ್ತಿ ಕೊಡಬೇಕಲ್ಲಾ ನಾವು. ಅದಕ್ಕೋಸ್ಕರ ನಿಲುವಳಿ ಸೂಚನೆ ರೂಪದಲ್ಲಿ ಇದನ್ನು ನಾವು ತಂದಿದ್ದೇವೆ. ನಿಮ್ಮ ಸ್ಟಾಂಪ್ ಡ್ಯೂಟಿ ಯಾವರೀತಿ ರಿಲೀಸ್ ಮಾಡಿದ್ದಾರೆ ಎಂಬುದನ್ನು ಹೇಳುತ್ತಿದ್ದೇನೆ. ಕೃಷ್ಣರಾಪುರ ಸಿಎಮ್‌ಸಿಗೆ ಕೊಡಬೇಕಾಗಿರತಕ್ಕಂತಹ ಸ್ಟಾಂಪ್ ಡ್ಯೂಟಿ ಎಷ್ಟು? 155 ರೂ. ಲಕ್ಷ (ಒಂದುವರೆ ಕೋಟಿ). ಇವರು ಬಿಡುಗಡೆ ಮಾಡಿರುವುದು 21 ಕೋಟಿ. ರೂ. ಇದು ಯಾರ ದುಡ್ಡು? ಮಹದೇವಪುರ ಸಿಎಮ್‌ಸಿ 81 ಲಕ್ಷ ರೂ. ಇವರು ಬಿಡುಗಡೆ ಮಾಡಿರುವುದು ಕೇವಲ 9 ಕೋಟಿ ರೂಪಾಯಿ. ಬೊಮ್ಮನಹಳ್ಳಿ ಸಿಎಮ್‌ಸಿಗೆ 169 ಲಕ್ಷ ಇವರು ಬಿಡುಗಡೆ ಮಾಡಿರುವುದು 1031 ಲಕ್ಷ ರೂ. ಅಂದರೆ 10 ಕೋಟಿ ರೂ. ಪಟ್ಟಣಗೆರೆ ಸಿಎಮ್‌ಸಿಗೆ 135 ಲಕ್ಷ ರೂ. ಬಿಡುಗಡೆ ಮಾಡಬೇಕು. ಇವರು ಬಿಡುಗಡೆ ಮಾಡಿರುವುದು 752 ಲಕ್ಷ ರೂ. ದಾಸರ ಹಳ್ಳಿ ಸಿಎಮ್‌ಸಿ 91 ಲಕ್ಷ ರೂ. ಇವರು ಬಿಡುಗಡೆ ಮಾಡಿರುವುದು 1008 ಲಕ್ಷ ರೂ. ಕೃಷ್ಣರಾಜಪುರ, ಮಹದೇವಪುರ, ಬೊಮ್ಮನಹಳ್ಳಿ, ಪಟ್ಟಣಗೆರೆ, ದಾಸರಹಳ್ಳಿ, ಬ್ಯಾಟರಾಯನಪುರ, ಯಲಹಂಕ, ಕೆಂಗೇರಿ, ಈ ಸಿ.ಎಂ.ಸಿ.ಗಳಿಗೆ ಒಟ್ಟಾರೆ ಡ್ಯೂ ಇರುವುದು ಕೇವಲ 7.3 ಕೋಟಿ ರೂ.ಗಳು. ಅಂದರೆ 730 ಲಕ್ಷ ರೂಪಾಯಿಗಳು. ಆದರೆ ಇವರು ಬಿಡುಗಡೆ ಮಾಡಿರುವುದು 8615 ಲಕ್ಷ ರೂಪಾಯಿಗಳು. who is responsible for the release of excess amount of Rs. 78.84 crores. ಇದನ್ನು ಹೇಗೆ ರಿಲೀಸ್ ಮಾಡಿದರು? ನಿಮ್ಮ ಐ.ಜಿ. ಏನು ಮಾಡುತ್ತಿದ್ದರು? ಈಗ ನಾನು ಹೇಳಿದ ವಿವರಗಳು 1999-2000ನೇ ಸಾಲಿನದು. ನಂತರ 2000-2001ನೇ ಸಾಲಿನ ಬಗ್ಗೆ ಹೇಳುತ್ತೇನೆ. ನಾನು ವಿವರಗಳನ್ನು ಹೇಳಲು ಹೋಗುವುದಿಲ್ಲ, ಸಮ್-ಅಪ್ ಆಗಿ ಹೇಳುತ್ತೇನೆ. 2000-01ನೇ ಸಾಲಿನಲ್ಲಿ ಏಳು ಸಿ.ಎಂ.ಸಿ.ಗಳಿಂದ ಡ್ಯೂ ಇರತಕ್ಕಂಥಾದ್ದು 10 ಕೋಟಿ ರೂಗಳು . ಆದರೆ ರಿಲೀಸ್ ಆಗಿರತಕ್ಕಂಥಾದ್ದು 177 ಕೋಟಿ ರೂಪಾಯಿಗಳು. ಈ ವರ್ಷ 239 ಕೋಟಿ ರೂಪಾಯಿಗಳ ಎಕ್ಸೆಸ್ ಅಮೌಂಟ್ ಹೇಗೆ ಬಿಡುಗಡೆ ಆಯಿತು? ಮಾನ್ಯ ರೈ ಅವರು ಒಂದು ಪ್ರಶ್ನೆ ಕೇಳಿದರು. ಅವರ ಸೀಟಿನಿಂದ ಎದ್ದು ಹೋಗಿ ಬಿಟ್ಟಿದ್ದಾರೆ. ಇರಲಿ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿ ಯಾದಾಗ ಮಾತ್ರ ಇದು ನಡೆಯಿತೇ? ಹಿಂದೆ ಆಗ್ತಿರಲಿಲ್ಲವೇ? ಲೋಕಾಯುಕ್ತರವರು ಈಗಿನದು ಮಾತ್ರ ರೈಡ್ ಮಾಡಿದರೇ ಎಂದು ಅವರು ಕೇಳಿದರು. ಭ್ರಷ್ಟಾಚಾರದ ಗಂಗೋತ್ರಿ ಎಲ್ಲಿ ಹುಟ್ಟಿಕೊಳ್ಳುತ್ತದೆ ಎಂಬುದನ್ನು ನಾನು ಹೇಳುತ್ತೇನೆ ಕೇಳಿ. ಹಿಂದೆ ನಾವೂ ಸರ್ಕಾರ ನಡೆಸಿದ್ದೇವು. ಆಗಿನ ವಿವರಗಳನ್ನು ಹೇಳುತ್ತೇನೆ. 1994-95ರಲ್ಲಿ ಡ್ಯೂ ಇದ್ದದ್ದು 617 ಲಕ್ಷ ರೂ. ಅಂದರೆ ಸುಮಾರು 6 ಕೋಟಿ ರೂಪಾಯಿಗಳು. ಆದರೆ ನಾವು ಬಿಡುಗಡೆ ಮಾಡಿದ್ದು 125 ಲಕ್ಷ ರೂಪಾಯಿಗಳು. ವೇಸ್ ಅಂಡ್ ಮೀನ್ಸ್ ಎಂದು ಹೇಳಿ, ಬಡವರ ಕಾರ್ಯಕ್ರಮಗಳಿಗೆ ಆದ್ಯತೆ ಕೊಟ್ಟು, ಸಿ.ಎಂ.ಸಿ. ಗಳಿಗೆ ನಾವು ಹಣವನ್ನು ರಿಲೀಸ್ ಮಾಡಲಿಲ್ಲ. 1995-96ರಲ್ಲಿ 45 ಕೋಟಿ ರೂಪಾಯಿ ಕಡಿಮೆ ರಿಲೀಸ್ ಮಾಡಿದ್ದೇವೆ. 1996-97 ರಲ್ಲಿ 33 ಕೋಟಿ ರೂಪಾಯಿ ಕಡಿಮೆ ರಿಲೀಸ್ ಮಾಡಿದ್ದೇವೆ. 1997-98 ರಲ್ಲಿ 105 ಕೋಟಿ ರೂಪಾಯಿ ಕಡಿಮೆ ರಿಲೀಸ್ ಮಾಡಿದ್ದೇವೆ. ಆದರೆ ನೀವು ಹೆಚ್ಚು ದುಡ್ಡನ್ನು ರಿಲೀಸ್ ಮಾಡಿದ್ದೀರಿ. ಇದು ಯಾವ ರೀತಿ

ಖರ್ಚಾಗಿದೆ ಹಾಗೂ ದುರುಪಯೋಗವಾಗಿದೆ ಎನ್ನುವುದನ್ನು ಲೋಕಾಯುಕ್ತದವರು ಪತ್ತೆ ಮಾಡಿದ್ದಾರೆ. ಹೇಳುವುದು ಇನ್ನೂ ಇದೆ.

ಅಧ್ಯಕ್ಷರು:- ಈಗ ಬೇಡ. ಮುಂದೆ ಅದನ್ನು ಹೇಳಿ. ಡೀಟೈಲ್ ಆಗಿ ಈಗ ಹೇಳುವುದು ಬೇಡ.

ಶ್ರೀ ಕೆ.ಹೆಚ್. ರಂಗನಾಥ್:- ನೀವು ಈ ನಿಲುವಳಿ ಸೂಚನೆ ತೆಗೆದುಕೊಂಡರೆ ನಾವು ಲೋಕಾಯುಕ್ತ ಮಾಡುತ್ತಿರುವುದನ್ನು ಸ್ಟಾಲ್ ಮಾಡಿದ ಹಾಗೆ ಆಗುತ್ತಿದೆ ಎನ್ನುವ ದೃಷ್ಟಿಯಿಂದಲೇ ನಾನು ಹೇಳಿದ್ದು. 70 ಕೋಟಿ ರೂಪಾಯಿಗಳಾಗಿದೆ ಎಂದು ಅವರು ಹೇಳಿದರು.ಕೆ.ಆರ್. ಪುರದ್ದು 80 ಕೋಟಿ ರೂಪಾಯಿಗಳು ಎಂದು ನಾನೂ ಪತ್ರಿಕೆಗಳಲ್ಲಿ ಓದಿದ್ದೇನೆ. ಅದೇ ರೀತಿ ಬೇರೆಬೇರೆಯದ್ದೂ ಬಂದಿರಬಹುದು. ಅದಕ್ಕಾಗಿ ಲೋಕಾಯುಕ್ತದವರು ಪೂರ್ಣ ಮಾಡಿದ ಮೇಲೆ ತೆಗೆದುಕೊಳ್ಳಿ ಅಥವಾ ನಾನು ಅವರ ಸ್ಥಾನದಲ್ಲಿ ಕುಳಿತಿದ್ದರೆ ಏನು ಮಾಡುತ್ತಿದ್ದೆ ಎಂದರೆ, ಈಗ ಅವರು ಏನು ಪ್ರಸ್ತಾಪ ಮಾಡಿದರಲ್ಲಾ ಅದನ್ನು ಎತ್ತಿ ನಿಲುವಳಿ ಸೂಚನೆ ಕೊಡುತ್ತಿದ್ದೆ. ಈ ರೂಪದಲ್ಲಿ ನಾನು ಕೊಡುತ್ತಿರಲಿಲ್ಲ. ಸ್ಟ್ಯಾಂಪ್‌ನಿಂದ ಒಂದು ಕೋಟಿ ರೂ. ಮಾಡಬೇಕಾಗಿತ್ತು ಜಾಸ್ತಿ ರಿಲೀಸ್ ಮಾಡಿದ್ದಾರಲ್ಲಾ ಅದನ್ನು ಎತ್ತಿ ನಿಲುವಳಿ ಸೂಚನೆ ಕೊಡುತ್ತಿದ್ದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ರಂಗನಾಥ್‌ರವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಅವರು ನಿಲುವಳಿ ಸೂಚನೆಯನ್ನು ವಾಪಸ್ಸು ತೆಗೆದುಕೊಂಡು ಬೇರೆ ರೂಪದಲ್ಲಿ ತರಲಿ ಎಂದು ನಾನು ನಿಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. Let him withdraw it and bring a separate motion. Once again, I request him through you.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ತಾವು ಕೇಳಿ ಅಪ್ಪಣೆ ಕೊಡುವಂಥಾದ್ದು ತಮಗೆ ಸೇರಿರತಕ್ಕಂಥಾದ್ದು. ಬಜೆಟ್‌ನಲ್ಲಿ ನಮಗೆ ಪೂರ್ಣ ಅವಕಾಶವಿದೆ. It is this House that sanctions the budget.

ಜುಲೈ 31ನೇ ತಾರೀಖಿನವರೆಗೆ ನಾವು ಇಲ್ಲಿ ಚರ್ಚೆ ಮಾಡಬಹುದು. You take up the matter under any Rule.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನೀವು ಹೇಳುವುದು ಸರಿ. ನಿಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಮಾನ್ಯ ಕೆ.ಹೆಚ್. ರಂಗನಾಥ್‌ರವರು ನನ್ನ ಸಹಾಯಕ್ಕೆ ಬಂದಿದ್ದಾರೆ, ಒಂದು ರೀತಿಯಲ್ಲಿ ತಮ್ಮ ಸಹಾಯಕ್ಕೂ ಬಂದಿದ್ದಾರೆ. ತಾವು ಹೇಳುವುದನ್ನು ನಾನು ಯಾವತ್ತೂ ಪಾಸಿಟೀವ್ ಆಗಿ ತೆಗೆದುಕೊಂಡಿದ್ದೇನೆ. ನಾನು ಏನು ಹೇಳಿದರೂ ಸಹ ನೀವು ಯಾವತ್ತೂ ಅದನ್ನು ಅಪ್ರೀಷಿಯೇಟ್ ಮಾಡಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್:- ಈ ಸದನದಲ್ಲಿ ನಿಯಮಗಳನ್ನು ಸರ್ಕಾರವನ್ನು ಉಳಿಸಲು ಮಾಡಿಕೊಂಡಿಲ್ಲ. ಸರ್ಕಾರ ಮಾಡತಕ್ಕಂಥ ತಪ್ಪುಗಳನ್ನು ಕಡಿಮೆ ಮಾಡಲು ರೂಲ್ಸ್ ಮಾಡಿಕೊಂಡಿರುವುದು ಈಗಿನ ಮುಖ್ಯಮಂತ್ರಿಗಳು ಬಂದ ಮೇಲೆ ಈ ಲೋಕಾಯುಕ್ತ ಅಪಾಯಿಂಟ್ ಆಯಿತು. ಅವರು ಮಾಡುತ್ತಿರತಕ್ಕಂಥಾದ್ದರ ಬಗ್ಗೆ ಒಂದು ದಿವಸವೂ ಒಂದು ಹೇಳಿಕೆಯನ್ನೂ ಮುಖ್ಯಮಂತಿಗಳು ಕೊಟ್ಟಿಲ್ಲ. You should appreciate his stand.

ಸರ್ಕಾರದಲ್ಲಿ ವೈಫಲ್ಯವಾಗುತ್ತದೆ ಎಂದು ಗೊತ್ತಾದರೂ ಕೂಡ, ಆ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದರೂ ಕೂಡ ಅದನ್ನು ತಡೆಯುವ ಕೆಲಸ ಮಾಡಲಿಲ್ಲ. He has made it very clear also. I will never come in the way of the Lok Aykta.

ಎನ್ನುವ ಮಾತನ್ನು ನಿನ್ನೆ ಕೂಡ ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಲೋಕಾಯುಕ್ತ ಕ್ರಮದ ಬಗ್ಗೆ ಮಾತನಾಡಬೇಡಿ ಎಂದು ಒಂದು ಕಡೆ ಹೇಳುತ್ತೀರಿ.

Sri K.H. Ranganath:- He has never come in the way of Lok Ayukta.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೋಡಿ, ಟ್ರ್ಯಾಕ್ ಪಕ್ಕದಿಂದ ಹೋಗುತ್ತಿದೆ ಇವರ ಗಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ:- ಡೀಟೈಲ್ ಡಿಸ್ಕಷನ್ ನಡೆಯುತ್ತಿದೆಯೇ? ಏನು ಡಿಸ್ಕಷನ್ ನಡೆಯುತ್ತಿದೆ ಎಂಬುದು ನಮಗೆ ಗೊತ್ತಾಗಬೇಕು. ಇದು ಪ್ರಿಲಿಮಿನರಿ ಸಬ್ಮಿಷನ್ ಅಲ್ಲವೇ?

Mr. Speaker:- I am telling him. But he is a senior member. What can I do? ಈ ರೀತಿ ಬೇಡ ಎಂದು ನಾನು ಆಗಲೇ ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾವು ಹೇಳುವುದು ಬಹಳ ಇದೆ. ಮಾನ್ಯ ರಂಗನಾಥ್ ರವರು ನನ್ನ ಸಹಾಯಕ್ಕೆ ಬಂದಿದಾರೆ. ನಾವು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಹೇಳಿರತಕ್ಕಂಥ ಪಾಯಿಂಟ್ಸ್ ಅನ್ನು ಅವರು ಅಪ್ರೀಷಿಯೇಟ್ ಮಾಡಿದ್ದಾರೆ. 240 ಕೋಟಿ ರೂಪಾಯಿಗಳ ಎಕ್ಸೆಸ್ ಅಮೌಂಟ್ ರಿಲೀಸ್ ಏನಾಗಿದೆ, ಅದರಷ್ಟು ಎಮರ್ಜನ್ಸಿ ಮತ್ತೊಂದು ಯಾವುದೂ ಇಲ್ಲ. ನಿಮ್ಮ ಹತ್ತಿರ ಈಗ ಆ 240 ಕೋಟಿ ರೂಪಾಯಿಗಳಿದ್ದಿದ್ದರೆ ಅದನ್ನು ನಿನ್ನೆ ಬಂದಿದ್ದ ಕಾಂಟ್ರಾಕ್ಟುದಾರಿಗೆ ಕೊಡಬಹುದಾಗಿತ್ತು, ನಿಂತು ಹೋಗಿರುವ ಅಭಿವೃದ್ಧಿ ಕೆಲಸಗಳಿಗೆ ಆ ಹಣವನ್ನು ರಿಲೀಸ್ ಮಾಡಬಹುದಾಗಿತ್ತು. ಈ ಸದನಕ್ಕೆ ಸೀಮಿತವಾಗಿ ನಾನು ಏನು ಚರ್ಚೆ ಮಾಡಬೇಕೆಂದಿದ್ದೇನೆ ಎಂದರೆ, ಖಂಡಿತವಾಗಿ ಅದು ಲೋಕಾಯುಕ್ತದ ಬಗ್ಗೆ ಅಲ್ಲ. ಮುಖ್ಯಮಂತ್ರಿಗಳಾದ ಮಾನ್ಯ ಕೃಷ್ಣಾರವರು, ಮುಖ್ಯಮಂತ್ರಿಗಳು, ಹಲವಾರು ಬಾರಿ ಹೇಳಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್:- ಸಣ್ಣಪುಟ್ಟದ್ದಕ್ಕೆಲ್ಲಾ ನಾವು ಈ ರೀತಿ ತಂದು, ಏನು ಮುಖ್ಯವಾಗಿ ಚರ್ಚೆ ಮಾಡಬೇಕು ಅಂಥ ವಿಷಯಗಳನ್ನು ಮುಂದಕ್ಕೆ ಹಾಕುತ್ತಾ ಹೋಗುವುದರಿಂದ ಏನಾಗುತ್ತದೆ ಎಂದರೆ, bureaucracy is saved. ಈ ಮನೆಯ ಸದಸ್ಯನಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಏಕೆಂದರೆ ತತಕ್ಷಣ ಇನ್‌ಡೈರಕ್ಟಲಿ ಪ್ರೊಟೆಕ್ಷನ್ ಕೊಡುತ್ತಿದ್ದೇವೆ. ನೀವು ಇದನ್ನು ರೂಲ್ಸಿನಲ್ಲಿ ತೆಗೆದುಕೊಂಡು ಬನ್ನಿ. ಯಾರು ಬೇಡವೆಂದು ಹೇಳುತ್ತಾರೆ. ತಮಗೇ ಗೊತ್ತಿದೆ, ಅನಿವಾರ್ಯವಾಗಿ ಕೊನೆಯ ದಿವಸ ಬಜೆಟ್ ಅನ್ನು ಪಾಸ್ ಮಾಡಿಕೊಳ್ಳಲು ಎಲ್ಲವನ್ನೂ ಒಟ್ಟಿಗೆ ಮತಕ್ಕೆ ಹಾಕಬೇಕಾಗುತ್ತದೆ ಎಂದು ಬಿ.ಎ.ಸಿ.ಯಲ್ಲಿ ನೀವೇ ಹೇಳಿದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಟೆಕ್ನಿಕಲ್ ಫ್ಲಾ ಹೆಸರಿನಲ್ಲಿ ನಮ್ಮ ವಿಷಯದ ಹಿಂದೆ ಇರತಕ್ಕಂಥ ಸ್ಪಿರಿಟ್ ಡ್ಯಾಂಪೆನ್ ಆಗುತ್ತದೆ. ನಾನು ಸರ್ಕಾರಕ್ಕೆ ಮತ್ತು ತಮಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಇದಕ್ಕಿಂತ ಗಂಭೀರವಾಗಿರತಕ್ಕಂಥದ್ದು ಬೇರೇನೂ ಇಲ್ಲ. ಅದಕ್ಕಾಗಿ ನಾವು ಈ ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕು ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು:- ಸಿಂಧ್ಯಾರವರೇ, ನಿಮ್ಮ ಮಾತನ್ನು ನಾನು ಅರ್ಥ ಮಾಡಿಕೊಂಡೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಇನ್ನೂ ನನ್ನ ಮಾತನ್ನು ಮುಗಿಸಿಲ್ಲ, ನನ್ನ ಮಾತನ್ನು ಮೊದಲು ಕೇಳಿ ಸ್ವಾಮಿ. 240 ಕೋಟಿ ರೂಪಾಯಿಗಳ ಎಕ್ಸೆಸ್ ರಿಲೀಸ್ ಆಗಿರುವುದು .....

Mr. Speaker:- I am not telling you to stop it. ಬೇಕಾದರೆ ಇನ್ನೂ ಒಂದೆರಡು ಗಂಟೆ ಮಾತನಾಡಿ; ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಬೇಡ ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು:- ನಾನು ಬೇಡ ಎಂದು ಹೇಳಲಿಲ್ಲ. I am not telling him to stop it. ಅದಕ್ಕೂ ಒಂದು ಲಿಮಿಟ್ ಬೇಡವೇ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇಷ್ಟು ಲಿಮಿಟ್ ಎಂದು ಹೇಳಿ. ಅಷ್ಟರಲ್ಲಿ ನಾನು ಮುಗಿಸುತ್ತೇನೆ. ಎಷ್ಟು ಹೊತ್ತು ನಾನು ಮಾತನಾಡಬಹುದು ಎಂಬುದನ್ನು ತಾವು ಹೇಳಿ.

ಅಧ್ಯಕ್ಷರು:- ತಮಗೇ ಗೊತ್ತಿದೆ, ನಾನೇನೂ ಹೇಳಬೇಕಾಗಿಲ್ಲ. ಪ್ರಿಲಿಮಿನರಿ ಸಬ್ಮಿಷನ್‌ಗೇ 2-3 ಗಂಟೆ ಮಾತನಾಡಿದರೆ ಹೇಗೆ? ವಿರೋಧ ಪಕ್ಷದ ನಾಯಕರುಗಳು ಮಾತನಾಡುವಾಗ ನಾನು ರಿಸ್ಟ್ರಿಕ್ಟ್ ಮಾಡುವ ಹಾಗಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ನಾನು ಮಾತನಾಡಲೇ?

ಅಧ್ಯಕ್ಷರು:- ಮಾತನಾಡಿ.

Mr. P.G.R. Sindhia:- I will abide by your order ನಾನು ಹೇಳತಕ್ಕಂಥದ್ದು ಇಷ್ಟೇ. ಈ ಎಕ್ಸೆಸ್ ದುಡ್ಡು ಏನು ರಿಲೀಸ್ ಆಗಿದೆ, ಆದ್ದುದ್ದು ರಿಲೀಸ್

ಆಗಬೇಕಾದರೆ ಈ ಸರ್ಕಾರದಲ್ಲಿರತಕ್ಕಂಥ ಜನ ಬವಾಬ್ದಾರರಾಗಿದ್ದಾರೆ. ಒಬ್ಬರು ಸಚಿವರು, 3-4 ಜನ ಐ.ಎ.ಎಸ್. ಅಧಿಕಾರಿಗಳು ಇದಕ್ಕೆ ಕಾರಣಕರ್ತರಾಗಿದ್ದಾರೆ. ಅದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಬ್ಯೂರೋಕ್ರಸಿಯನ್ನು ಸೇವ್ ಮಾಡುತ್ತಿದ್ದೇವೆ ಎಂದು ಮಾನ್ಯ ರಂಗಾಥ್‌ರವರು ಹೇಳಿದರು. ಅದು ಸತ್ಯಕ್ಕೆ ದೂರವಾಗಿರತಕ್ಕಂಥ ಮಾತು.

2.00 ಪಿಎಂ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಖಂಡಿತವಾಗಿ ಹೇಳುತ್ತೇನೆ. I am not prepared to hold brief for anybody.

ಶ್ರೀ ಕೆ.ಹೆಚ್. ರಂಗನಾಥ್:- ಇಂತಹ ಪರಿಸ್ಥಿತಿ ಬಂದೆ ನಾವು ಯಾರನ್ನು ಸೇವ್ ಮಾಡುತ್ತೇವೆ. ಪ್ರತಿವರ್ಷ ಸಕಾಲದಲ್ಲಿ ಡಿಸಕಷನ್ ಆಗದೆ, ಪ್ರತಿವರ್ಷ ಅನಿವಾರ್ಯವಾಗಿ ಬಜೆಟ್‌ನ್ನು ಗಿಲ್‌ಟಿನ್‌ಗೆ ಹಾಕಿದರೆ ಯಾರನ್ನು ಸೇವ್ ಮಾಡಿದ ಹಾಗೆ ಆಯಿತು?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ತಾವು ನಿಲುವಳಿ ಸೂಚನೆಯಲ್ಲಿ ದಯವಿಟ್ಟು ಅವಕಾಶ ಮಾಡಿಕೊಡಿ. ಬಹುಶಃ ಇದು ಇತ್ತೀಚಿನ ದಿನಗಳಲ್ಲಿ ನಡೆದಿರತಕ್ಕಂಥ ಬಿಗ್ಗೆಸ್ಟ್ ಸ್ಕ್ಯಾಂಡಲ್. ಇದಕ್ಕಿಂತ ದೊಡ್ಡ ಸ್ಕ್ಯಾಂಡಲ್ ಇನ್ನು ಯಾವುದೂ ಸಹಿತ ಇಲ್ಲ. ಇದನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನಗಳಾಗತಕ್ಕಂಥ ಸಂಭವಗಳು ಇದೆ. ಆ ಶಂಕೆ ನನಗೆ ಇದೆ. ಅದನ್ನು ನಾನು ಹೇಳುತ್ತಿದ್ದೇನೆ. ಅದಕ್ಕೋಸ್ಕರ ಅದನ್ನು ನಿಲುವಳಿ ಸೂಚನೆಯಲ್ಲಿ ತಾವು ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವೈ.ಕೆ.ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಇದನ್ನು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಅಧ್ಯಕ್ಷರು:- ಎಲ್ಲರೂ ಮಾತನಾಡುತ್ತೇನೆ ಎಂದರೆ, ಎಲ್ಲರಿಗೂ ಚಾನ್ಸ್ ಕೊಡಬೇಕು. ಫ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಒಬ್ಬರು ಮಾತನಾಡಬೇಕು.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ತಾವು ಯಾವ ರೀತಿಯಲ್ಲಿ ಚರ್ಚೆ ಅವಕಾಶ ಮಾಡಿಕೊಡುತ್ತೀರಿ ಆಗ ಹೇಳುತ್ತೇನೆ. ಇವತ್ತು ಇಷ್ಟಕ್ಕೆ ಮಾತ್ರ ಸೀಮಿತವಾಗಿ ಹೇಳುತ್ತೇನೆ. ಇದು ನಿಲುವಳಿ ಸೂಚನೆಯಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸ್ನೇಹಿತರಾದಂತಹ ಸಿಂಧ್ಯರವರು ಹಾಗೂ ಉಳಿದ ಸ್ನೇಹಿತರುಗಳು ತಂದಿರುವಂತಹ ನಿಲುವಳಿ ಸೂಚನೆಯನ್ನು ತರಿಸಿ ನೋಡಿದೆ. ಅದರಲ್ಲಿ ಲೋಕಾಯುಕ್ತದ ಬಗ್ಗೆ ಇದೆ. ಮುನಿಸಿಪಾಲಿಟಿ ಹಾಗೂ ಸರ್ಕಾರದ ಬಗ್ಗೆ ಇದೆ. ತಾವು ಆ ಒಂದು ನೋಟೀಸನ್ನು ನೋಡಬಹುದು. ಅಂತಹ ಸಂದರ್ಭದಲ್ಲಿ ಈ ನಿಲುವಳಿ ಸೂಚನೆಯನ್ನು ತರುವುದಕ್ಕೆ ಆಗುವುದಿಲ್ಲವೆಂದು ಹಿಂದಿನವರು ಬಹಳ ದೊಡ್ಡವರೆಲ್ಲಾ ಹೇಳಿದ್ದಾರೆ. A matter sought to be raised by an Adjurnment Motion should relate to single specific matter.

ಆ ನಿಲುವಳಿ ಸೂಚನೆಯಲ್ಲಿ ಲೋಕಾಯುಕ್ತ ಇದೆ, ಕಾರ್ಪೋರೇಷನ್ ಇದೆ, ಮುನಿಸಿಪಾಲಿಟಿ ಇದೆ, ಸರ್ಕಾರ ಇದೆ. ಹಾಗೂ ಅವರೇ ವಾದ ಮಾಡಿದ ಹಾಗೆ ಅಧಿಕಾರಿಗಳು ಇದ್ದಾರೆ. ಅವರೇ ವಾದ ಮಾಡಿದ ಹಾಗೆ ಮಂತ್ರಿಗಳು ಇದ್ದಾರೆ. Therefore, this matter does not relate to a single specific matter. That is why this cannot be discussed as an adjournment motion.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ:- ನೀವು ಮಾತನಾಡುವಾಗ ನಾನು ಇಲ್ಲಿ ಎಲ್ಲಾ ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಂಡಿರುತ್ತೇನೆ. ಬಾಯಿ ಏನೇನು ಮುಚ್ಚಿಕೊಳ್ಳಬೇಕೋ ಅದನ್ನು ಮುಚ್ಚಿಕೊಂಡು; I don't tolerate iterruption from anybody.ನಿಮಗೆ ಮೆಚ್ಚುಗೆ ಆಗುವ ಹಾಗೆ ಮಾತನಾಡುವುದಕ್ಕೆ ನಾನು ಇಲ್ಲಿಗೆ ಬಂದಿಲ್ಲ. ಯಾವುದು ನಿಲುವಳಿ ಸೂಚನೆಯಾಗಿ ಚರ್ಚೆ ಮಾಡುವುದಕ್ಕೆ ಬರುತ್ತದೆ ಎಂದರೆ, generally the subject matter of the adjournment motion must have been a direct or indirect relation to the conduct default on the part of Government of India or the State Government and must be in the nature of criticism against the action of the government.

ಮಾನ್ಯ ರಂಗನಾಥ್‌ರವರು ಹೇಳಿದ ಹಾಗೆ It is not a censure motion, ಎಂದು ನಮ್ಮ ಹಿರಿಯ ಸದಸ್ಯರು ಹೇಳಿದರು. Adjournment motion is to criticise someone, to censure someone for his default, for his omission and commission. Here, are you going to censure the Lokayuktha? That is why, it cannot be discussed in the form of an adjournment motion. An Adjournment motion is not advisable, unless there is a failure on the part of the government to perform the duties enshrined in the Constitution by law.

ಸರ್ಕಾರ ತನ್ನ ಕರ್ತವ್ಯದಲ್ಲಿ ದೋಷ ಮಾಡಿದ್ದರೆ ಆಗ ಸೆನ್ಸರ್ ಮೋಷನ್ ಅನ್ನು ತರಬಹುದು. ಮತ್ತೊಂದು ಸಂದರ್ಭದಲ್ಲಿ ಯಾವಾಗ ತರಬಹುದು ಎಂದರೆ ಸರ್ಕಾರ ತಾನು ಮಾಡಿದಂತಹ ಕೆಲಸದಲ್ಲಿ ಏನಾದರೂ ದೋಷ ಮಾಡಿದ್ದರೆ ತರಬಹುದು. ಇಲ್ಲಿ ಲೋಕಾಯುಕ್ತದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಎರಡು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. "I congratulate him for his performance". Further, he says "we have to strengthen Lokayuktha."

ಅದು ಅವರಿಗೆ ಶಿಕ್ಷೆ ಕೊಡುವಂತಹ ಅಧಿಕಾರವನ್ನು ತಿದ್ದುಪಡಿ ತಂದಾದರೂ ಕೂಡ, ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. It is the omission on the part of the government? It is a fault on the part of the Govt? Instead of censuring the government, you have to congratulate the Government.

ಎಸ್.ಎಂ. ಕೃಷ್ಣ ಅವರ ಜೊತೆಯಲ್ಲಿ ರಾಜ್ಯ ಸರ್ಕಾರ ಹುಟ್ಟಿ ಬರಲಿಲ್ಲ. ಮಾನ್ಯ ಕೆ.ಸಿ. ರೆಡ್ಡಿಯವರ ಜೊತೆಯಲ್ಲಿ ಹುಟ್ಟಿ ಬಂತು. ಲೋಕಾಯುಕ್ತ ನಿನ್ನೆ ದಿನ ಎಸ್ಟಾಬ್ಲಿಷ್ ಆಗಿಲ್ಲ.The institution was established decades ago. Why other Lokayukthas and other governments kept quiet and why this government is encouraging the Lokayuktha to dig the corruption matters?

ನಾನು ಈ ಮಾತನ್ನು ಏಕೆ ಹೇಳತ್ತಿದ್ದೇನೆ ಎಂದರೆ ಈ ಕಡೆ ನಾವು ಕುಳಿತಿದ್ದೇವಲ್ಲಾ ಸ್ವಾಮಿ, ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವ ವಿಷಯದಲ್ಲಿ ನಾವ್ಯಾರು ಎರಡನೆಯವರಲ್ಲ. ಆ ಕೆಲಸವನ್ನು ಮಾಡಲು ನಮ್ಮ ವೆಂಕಟಾಚಲಯ್ಯ ಅವರೇ ಇರಲಿ, ನಮ್ಮ ಸಿಂಧ್ಯರವರೇ ಮಾಡಲಿ, ನಮ್ಮ ಶೆಟ್ಟರ್ ಅವರೇ ಮಾಡಲಿ, ಅದಕ್ಕೆ ನಾವೆಲ್ಲರೂ ಧ್ವನಿಗೂಡಿಸುವಂತಹವರು. ಆದುದರಿಂದ ನನ್ನ ಪ್ರಶ್ನೆ ಇಷ್ಟೆ. ಈ ವಿಷಯವನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಇದನ್ನೆಲ್ಲಾ ಓದಿ 69ನೇ ನಿಯಮದ ಕೆಳಗಡೆ ನೋಟೀಸ್ ಕೊಟ್ಟಿದ್ದೇನೆ. ಇದನ್ನು ನಿಲುವಳಿ ಸೂಚನೆಯಾಗಿ ಇಲ್ಲಿ ಚರ್ಚೆ ಮಾಡುವುದಕ್ಕೆ ಸಾಧ್ಯತೆ ಇಲ್ಲ ಏಕೆಂದರೆ ಯಾರಿಗೂ ಕೂಡ ಸೆನ್ಸಾರ್ ಮಾಡುವಂತಹ ಪ್ರಶ್ನೆ ಇಲ್ಲ. ಸೆನ್ಸಾರ್ ಮಾಡಬೇಕೆನ್ನುವುದಾದರೆ ನನ್ನ ಸ್ನೇಹಿತರು ನಿಲುವಳಿ ಸೂಚನೆಯನ್ನು ವಿತ್‌ಡ್ರಾ ಮಾಡಿಕೊಂಡು ಸರ್ಕಾರದ ವಿರುದ್ಧ ಮೋಷನ್ ತರಲಿ. We have no objection. You can take a decision.

The action of the government of the state which is empowered to take under the provisions of the Constitution cannot form the suject matter of the adjournment motion. ಅದು ಅಷ್ಟಕ್ಕೆ ನಿಲ್ಲುವುದಿಲ್ಲ. ಸಿಂಗಲ್ ಮ್ಯಾಟರ್ಸ್ ಆಗಿರಬೇಕು ಒಂದು, ಆದರೆ ಒದಕ್ಕಿಂತ ಜಾಸ್ತಿ ಮ್ಯಾಟರ್ಸ್ ಇದೆ. ಸರ್ಕಾರದ ಫೈಲ್ಯೂರ್ ಇದರಲ್ಲಿ ಏನೂ ಇಲ್ಲ. ಎರಡನೆಯದಾಗಿ, the Government is encouraging the Lokayukta. ಸರ್ಕಾರದ ಲೋಕಾಯುಕ್ತಕ್ಕೆ ಶಹಭಾಸ್‌ಗಿರಿ ಕೊಡುತ್ತಿದೆ. ಅವರಿಗೆ ಇನ್ನೂ ಜಾಸ್ತಿ ಅಧಿಕಾರ ಕೊಡಬೇಕೆಂದು ಹೇಳುತ್ತಿದ್ದಾರೆ. ಅವರು ಮಾಡುತ್ತಿರತಕ್ಕಂಥ ಕೆಲಸವನ್ನು ಶ್ಲಾಘಿಸುತ್ತಿದ್ದಾರೆ. For this, are you going to censure the government?

ಎಲ್ಲಾ ನಮ್ಮ ಸ್ನೇಹಿತರು ಒಬ್ಬರಿಗಿಂತ ಹೆಚ್ಚಾಗಿ ಭ್ರಷ್ಟತನವನ್ನು ಮುಚ್ಚಿ ಹಾಕುವುದಕ್ಕೆ ಸರ್ಕಾರ ಮಾಡುತ್ತಿರತಕ್ಕಂಥ ಕೆಲಸ ಎಂದು ಹೇಳಿದರು. ಬಹಳ ಅತ್ಯಂತ ನೋವಿನಿಂದ ಈ ಮಾತನ್ನು ಆಡಬೇಕಾಗುತ್ತದೆ. Rather, it is otherwise.

ಭ್ರಷ್ಟಾಚಾರವನ್ನು ನಿಯಂತ್ರಣ ಮಾಡುವುದಕ್ಕೆ ಸನ್ಮಾನ್ಯ ವೆಂಕಟಾಚಲಯ್ಯ ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಅದನ್ನು ನಾವು ಆತ್ಮಪೂರ್ವಕವಾಗಿ, ಹೃದಯಪೂರ್ವಕವಾಗಿ ಪಕ್ಷದ ದೃಷ್ಟಿಯಿಂದ ಅಲ್ಲಿ ಸರ್ಕಾರದ ದೃಷ್ಟಿಯಿಂದ ಅಲ್ಲಿ ಈ ದರಿದ್ರ ಕ್ಷೇತ್ರದಲ್ಲಿ ಇರುವಂತಹ ಭ್ರಷ್ಟಾಚಾರವನ್ನು ತೊಡೆದು ಹಾಕುವುದಕ್ಕೆ ಮಾಡುತ್ತಿರುವಂತಹ ಕೆಲಸಕ್ಕೆ ನಾವೆಲ್ಲರೂ ಒಗ್ಗೂಡೋಣ. ಇದರ ಬಗ್ಗೆ ಚರ್ಚೆ ಮಾಡಬೇಕೆನ್ನುವ ವಿಷಯದಲ್ಲಿ ಅವರ ಜೊತೆ ನಾವೂ ಸೇರುವುದಕ್ಕೆ ಸಿದ್ಧರಾಗಿದ್ದೇವೆ. ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಯಾವ ಫಾರಂ ಮುಖಾಂತರ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೋ, ಆ ಫಾರಂ ಮುಖಾಂತರ ಚರ್ಚೆ ಮಾಡಿ. Not thorugh

censure. ನಾನು ಸದನದಲ್ಲಿ ಒಟ್ಟಾರೆ ಠರಾವನ್ನು ಪಾಸ್ ಮಾಡಿ, ದೇವರು ಅವರಿಗೆ ಆಯಸ್ಸು, ಆರೋಗ್ಯ ಕೊಡಲಿ, ಅವರು ಇನ್ನೂ ಶಕ್ತಿಯುತವಾಗಿ ಕೆಲಸ ಮಾಡಲಿ. ಅವಶ್ಯಕತೆ ಇದ್ದರೆ ಇರುವಂತಹ ಕಾನೂನನ್ನು ತಿದ್ದಿ ಅವರ ಹಲ್ಲುಗಳನ್ನು ಇನ್ನೂ ಶಾರ್ಪ್ ಮಾಡೋಣವೆಂದು ಸ್ನೇಹಿತರಲ್ಲಿ ಕೇಳಿಕೊಂಡು ದಯಮಾಡಿ ನಿಲುವಳಿ ಸೂಚನೆ ತೆಗೆದುಕೊಳ್ಳುವುದು ಬೇಡ. ನಿಯಮ 69ರ ಕೆಳಗಡೆ ನಾನು ಕಳುಹಿಸಿರುವ ನೋಟೀಸ್ ತೆಗೆದುಕೊಂಡು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ವಿರೋಧಪಕ್ಷದವರು ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ ಹಾಗೂ ಮಾನ್ಯ ಶೆಟ್ಟರ್‌ರವರು ಹೇಳಿದ್ದನ್ನು ಕೇಳಿದ್ದೇನೆ. ಮಾನ್ಯ ಸಿಂಧ್ಯರವರು ಹೇಳಿದ್ದು ಕೇಳಿದ್ದೇನೆ. ಮಾನ್ಯ ಕೆ.ಹೆಚ್. ರಂಗನಾಥ್‌ರವರು ಹೇಳಿದ್ದನ್ನು ಕೇಳಿದ್ದೇನೆ. ಹಾಗೂ ಮಾನ್ಯ ವೈಕೆ. ರಾಮಯ್ಯನವರು ಹೇಳಿದ್ದನ್ನು ಕೇಳಿದ್ದೇನೆ. ನನ್ನ ಸಬ್‌ಮಿಷನ್ ಏನೆಂದರೆ when other opportunities are available immediately, ಅಲ್ಲಿ ಅವೆಲಬಲ್ ಏನು ಸಬ್ಜೆಕ್ಟ್ ಇರುತ್ತದೋ, ಅದನ್ನು ಇಲ್ಲಿ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿ ನನಗಂತೂ ಹಿಂದೆ ಇದ್ದಂತಹ ಏಳು ಸ್ಪೀಕರ್‌ಗಳು 1952, 1956, 1958, 1970, 1986 ಹಾಗೂ 1988ರಲ್ಲಿ ಹೇಳಿದ್ದಾರೆ. ಇಷ್ಟು ನಮ್ಮ ಮುಂದೆ ಇದರ ಬಗ್ಗೆ ಇರುವಂತಹ ರೂಲಿಂಗ್ಸ್. I am allowing this in some other form after consultation with the government, preferably on Monday.

ಶ್ರೀ ಜಗದೀಶ್‌ಶೆಟ್ಟರ್:- ಇದರ ಬಗ್ಗೆ ನಾವು ಇನ್ನು ಸಬ್‌ಮಿಷನ್ ಮಾಡ-ಬೇಕಾಗುತ್ತದೆ. ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ.

ಅಧ್ಯಕ್ಷರು:- ಸರ್ಕಾರವನ್ನು ಕನ್‌ಸಲ್ಟ್ ಮಾಡಬೇಕಲ್ಲ. I cannot straightaway allow without consulting the government.

ಶ್ರೀ ಜಗದೀಶ್‌ಶೆಟ್ಟರ್:- ಇದರಲ್ಲಿ ಸಾಕಷ್ಟು ವಿಚಾರಗಳನ್ನು ನಾವು ಪ್ರಸ್ತಾಪ ಮಾಡು-ವುದು ಇದೆ. ಸಾಕಷ್ಟು ಬೆಳಕು ಚೆಲ್ಲುವುದು ಇದೆ.

ಅಧ್ಯಕ್ಷರು:- ದಯವಿಟ್ಟು ತಾವು ಬನ್ನಿ. ಮಾನ್ಯ ಸಿಂಧ್ಯ ಹಾಗೂ ಮಾನ್ಯ ಚಂದ್ರೇಗೌಡರು ಬರಲಿ. ಅಲ್ಲಿ We can take a decision to be taking it up on Monday ro Tuesday.

ಶ್ರೀ ಜಗದೀಶ್ ಶೆಟ್ಟರ್:- ಇದು ಕಂಟಿನ್ಯೂಯಸ್ ಆಗಿ ಚರ್ಚೆಯಾಗಬೇಕು. ನಾವು ನಿಲುವಳಿ ಸೂಚನೆಯನ್ನು ತಂದಿದ್ದು ಏಕೆ?

Mr. Speaker:- I am not allowing as an adjournment motion. ಅದು ಆಗುವುದಿಲ್ಲ. ನೀವು ಬನ್ನಿ, ಬೇರೆ ಯಾವ ರೂಪದಲ್ಲಿ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಡಿಸಿಷನ್ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್:- ನೀವು ಈ ರೀತಿ ಮೊಂಡುತನ ಮಾಡಿದರೆ ನಾವು ಧರಣಿ ಮಾಡಬೇಕಾಗುತ್ತದೆ.

Sri D.B. Chandre Gowda:- This is too much on the part of the opposition.

(ಈ ಹಂತದಲ್ಲಿ ಬಿಜೆಪಿಯ ಮಾನ್ಯ ಸದಸ್ಯರುಗಳು ಭಾವಿಗೆ ಧರಣಿ ಮಾಡಲು ಬಂದರು)

(ಗೊಂದಲ)

ಅಧ್ಯಕ್ಷರು:- ಸದಸ್ಯರು ಒಟ್ಟಿಗೆ ನಾಲ್ಕೈದು ಜನರು ಮಾತನಾಡಿದರೆ ರೆಕಾರ್ಡ ಮಾಡಬೇಡಿ. ನಾನು ಈ ವಿಷಯದ ಬಗ್ಗೆ ಎರಡೂ ಕಡೆ ಸದಸ್ಯರುಗಳು ಮಾತನಾಡಿದ್ದು ಕೇಳಿದ್ದೇನೆ, ಇದಕ್ಕೆ ಅನೇಕ ರೂಲಿಂಗ್ಸ್ ಇದೆ, ನಾನು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾ ಇಲ್ಲ, ತಾವೆಲ್ಲರೂ ನನ್ನ ಛೇಂಬರ್‌ಗೆ ಬನ್ನಿ, ಇದರ ಬಗ್ಗೆ ಇವತ್ತೇ ಡಿಸಿಷನ್ ತೆಗೆದುಕೊಳ್ಳೋಣ. We can sit after lunch.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ಸುಮಾರು ಮೂರು ಗಂಟೆ ಕಾಲ ಇದೇ ವಿಷಯವಾಗಿ ಚರ್ಚೆಯಾಗಿದೆ, ಅವರು ಏನು ಹೇಳಬೇಕೋ ಅದನ್ನು ಹೇಳಲಿ, ಅದಕ್ಕೆ ನಮ್ಮದು ಏನೂ ತಕರಾರು ಇಲ್ಲ. ಇದನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೆಂಬ ಬಗ್ಗೆ ತಾವು ತೀರ್ಮಾನ ಮಾಡುತ್ತೀರಿ, ಮತ್ತೆ ಇದನ್ನು ನಮ್ಮ ಸರ್ಕಾರವನ್ನು ಕೇಳಿ ಮಾಡುತ್ತೀರಿ. ಇಲ್ಲಿ ಮುಖ್ಯವಾಗಿ ಅವರು ಏನು ಹೇಳುವುದು, ಈ ಭ್ರಷ್ಟಾಚಾರಕ್ಕೆ ಸರ್ಕಾರದ ರಕ್ಷಣೆ ಇದೆ ಎಂದು ಹೇಳಿದರು. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮೇಲ್ಮನೆಯಲ್ಲೂ ಕೂಡ, ನಿಯಮ 330ರ ಅಡಿಯಲ್ಲಿ ತೆಗೆದುಕೊಂಡತಹ ಸಂದರ್ಭದಲ್ಲಿ, ಗಮನ ಸೆಳೆಯುವ ಸೂಚನೆಯಡಿಯಲ್ಲಿ ತೆಗೆದುಕೊಂಡಂತಹ ಸಂದರ್ಭಗಳಲ್ಲಿ ವಿಷಯ ಮುಕ್ತವಾಗಿ ಚರ್ಚೆಯಾಗಲಿ, ಎಂದು ಮೂರು ಗಂಟೆಗಳ ಕಾಲಾವಕಾಶವನ್ನು ಕೊಟ್ಟು ಚರ್ಚೆ ಮಾಡಿದ್ದಾರೆ; ಇಲ್ಲೂ ಮೂರು ಗಂಟೆಗಳಲ್ಲ, ಮೂವತ್ತು ಗಂಟೆಗಳು ಬೇಕಾದರೂ ಚರ್ಚೆಯಾಗಲಿ., ಅದಕ್ಕೆ ನಮ್ಮ ಅಭ್ಯಂತರ ಏನೂ ಇಲ್ಲ, ನಾವೇ ಈ ಲೋಕಾಯುಕ್ತಕ್ಕೆ ಶಕ್ತಿ ಕೊಡುತ್ತಿರುವಂಥಾದ್ದು, ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರ ಈ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕೆಂದು ಹೊರಟಿರುವಂಥಾದ್ದು, ಎಂಬುದನ್ನು ತಾವು ಮರೆಯಬಾರದು. ಯಾವ ಸರ್ಕಾರಗಳೂ ಈ ಲೋಕಾಯುಕ್ತಕ್ಕೆ ಇಷ್ಟು ಶಕ್ತಿಯನ್ನು ಕೊಟ್ಟಿರಲಿಲ್ಲಿ, ಯಾರೂ ಈ ಲೋಕಾಯುಕ್ತದವರಿಗೆ ಕಾಳಜಿ ವಹಿಸಲು ಅಧಿಕಾರ ಕೊಟ್ಟಿರಲಿಲ್ಲ, ಇದನ್ನು ತಾವು ಮರೆಯಬಾರದು.

ಅಧ್ಯಕ್ಷರು:- ಈಗ ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡೋಣ, ಮಾನ್ಯ ಸಿಂಧ್ಯರವರು, ಮಾನ್ಯ ಚಂದ್ರೇಗೌಡರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನನ್ನ ಚೆಂಬರ್‌ಗೆ ಬನ್ನಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ಬೆಳಗಿನಿಂದಲೂ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಸರ್ಕಾರದ ಅಭ್ಯಂತರವಿಲ್ಲವೆಂದು ಹೇಳಿದ್ದೇನೆ, ಇದನ್ನು ಮೂರು ಸಲವಲ್ಲ, ಐದು ಸಾರಿ ಹೇಳುತ್ತೇನೆ, ಆದರೆ ಈ ವಿಷಯವನ್ನು ನಿಲುವಳಿ ಸೂಚನೆಯಡಿಯಲ್ಲಿ ತರುವಂಥಾದ್ದಕ್ಕೆ ನಮ್ಮ ವಿರೋಧವಿದೆ. ಇದನ್ನು ಯಾವ ರೂಪದಲ್ಲಿ ಚರ್ಚೆಗೆ ತರಬೇಕೆಂಬುದನ್ನು ತಾವು ನಿರ್ಧಾರ ಮಾಡಬೇಕೇ ಹೊರತು ಇದನ್ನು ತಮ್ಮ ಕೊಠಡಿಯಲ್ಲಿ ಕುಳಿತು ಚರ್ಚೆ ಮಾಡುವಂತಹ ವಿಚಾರ ಏನೂ ಅಲ್ಲ. ಇದಕ್ಕಿಂತ ಹೆಚ್ಚು ನಾನು ಏನು ಹೇಳಲಿ?

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ತಮ್ಮ ರೂಮಿಗೆ ಹೋಗುವುದು ಏನೂ ಬೇಡ, ಇಲ್ಲೇ ರೂಲಿಂಗ್ ಕೊಡಿ ಎಂದು ಹೇಳುತ್ತಿದ್ದಾರೆ, ತಾವು ರೂಲಿಂಗ್ ಕೊಡಿ.

Mr. Speaker: I have already rejected the adjournment motion. Shall we take up for discussion on Monday?

ಶ್ರೀ ಡಿ.ಬಿ. ಚಂದ್ರೇಗೌಡ:- ಆಗಬಹುದು.

Mr. Speaker:- Since the government has agreed, we will take up this under Rule 69 on Monday. Now the House is adjourned to meet at 11.00 A.M. on Monday.

- - - - -

(The House adjourned at 2.05 P.M. to meet again on
Monday the 15th July 2002, at 11.00 A.M.)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).

ಅನುಬಂಧ - I

ಸೋಮವಾರ ಪೇಟೆ ತಾಲ್ಲೂಕ ಚಿಕ್ಲಿ ಹೊಳೆ ಜಲಾಶಯದ ಕಾಮಗಾರಿ

114(319) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಚಿಕ್ಲಿಹೊಳೆ ಜಲಾಶಯದ ಯೋಜನೆ ತಯಾರಾಗಿದ್ದು ಯಾವಾಗ, ಇದಕ್ಕಾಗಿ ತೆಗೆದಿರಿಸಿದ ಹಣ ಎಷ್ಟು;